# ಅನಂತಪಥ

ANANTHKUMAR PRATISHTHANA

ಗುರುಪೂರ್ಣಿಮೆಯ ನಿಮಿತ್ತ ವಿಶೇಷ ಲೇಖನ



ಪುಟ 6 ವ್ಯಕ್ತಿ ವಿಶೇಷ ಪ್ರೊ.ಪಿ.ವಿ. ಕೃಷ್ಣಭಟ್ಟ

ಸಂಪುಟ - 3 ಜುಲೈ - 2023 ಸಂಚಿಕೆ - 37


# ಪ್ರೇರಣಾಶೀಲ ನಾಯಕತ್ವದ ಹಲವು ಮುಖಗಳು




1980ರ ದಶಕದ ಪ್ರಾರಂಭ. ಅಸ್ಸಾಂ ಆಂದೋಲನ ಇಡೀ ಜಗತ್ತಿನ ಗಮನವನ್ನೇ ಸೆಳೆದಿತ್ತು. ಕಾರಣ, ಈ ಆಂದೋಲನದ ಮುಂಚೂಣಿಯಲ್ಲಿ ನಿಂತವರು ವಿದ್ಯಾರ್ಥಿಗಳೇ. ಅವರಿಗೆ ಬೆಂಬಲ ನೀಡಿ ಹುರಿದುಂಬಿಸಲು ಕರ್ನಾಟಕದಿಂದಲೂ ಒಂದು ಯುವತಂಡ ತೆರಳಿತ್ತು. ಆಂದೋಲನವನ್ನು ವಿಫಲಗೊಳಿಸಲು ಪೋಲೀಸರು ಲಾಠಿಚಾರ್ಜ್, ಗೋಲಿಬಾರ್ ಮೊದಲಾಗಿ ಎಲ್ಲ ಅಸ್ತ್ರಗಳನ್ನೂ ಪ್ರಯೋಗಿಸತೊಡಗಿದ್ದರು. ಕರ್ನಾಟಕದಿಂದ ತೆರಳಿದ್ದ ವಿದ್ಯಾರ್ಥಿಗಳ ಗುಂಪನ್ನು ಬಂಧಿಸಿ, ವಾಹನದಲ್ಲಿ ತುಂಬಿಕೊಂಡು ದಟ್ಟವಾದ ಕಾಡಿನಲ್ಲೆಲ್ಲೋ ಇಳಿಸಿ ಹೊರಟುಬಿಟ್ಟರು. ಗೊತ್ತುಗುರಿ ತಿಳಿಯದ ಅರಣ್ಯದಲ್ಲಿ ದಾರಿಗಾಣದ ಹುಡುಗರು ಅಸಹಾಯಕತೆಯಿಂದ ತಮ್ಮ ನಾಯಕನನ್ನು ಸುತ್ತುವರಿದು ನಿಂತರು. ಆ ನಾಯಕನೂ ಉಳಿದವರ ವಯಸ್ಸಿನವನೇ. ಆದರೆ, ಆತ್ಮವಿಶ್ವಾಸ ಕಿಂಚಿತ್ತೂ ಕುಗ್ಗದಿದ್ದ ಆ ಉತ್ಸಾಹಿ ನಾಯಕ, ದೃಢಧ್ವನಿಯಲ್ಲಿ ಹೇಳಿದ: "ರಸ್ತೆ ಹುಡುಕೋಣ, ವಾಹನ ಹತ್ತೋಣ, ಪಟ್ಟಣ ಸೇರೋಣ!" ನಾಯಕ ಹೇಳಿದ ಪರಿಹಾರರೂಪದ ಸೂತ್ರ ವಿದ್ಯಾರ್ಥಿಗಳಲ್ಲಿ ಚೇತನ ತುಂಬಿತು. ಅಪರಿಚಿತ ನಾಡಿನಲ್ಲಿ ಕುಗ್ಗದೆ ಆತಂಕದಿಂದ ಪಾರಾಗಲು ನೆರವಾಯಿತು.

ಹೀಗೊಂದು ಕಠಿಣ ಸಂದರ್ಭ ಎದುರಾದರೂ ಧೃತಿಗೆಡದೆ ದಾರಿತೋರಿದ ಆ ನಾಯಕ- ಅನಂತಕುಮಾರ್! ಎಂಥ ಪರಿಸ್ಥಿತಿಯಲ್ಲೂ ಮನಸ್ಥೈರ್ಯವನ್ನು ಕಳೆದುಕೊಳ್ಳದ, ಯಾವುದೇ ಸಮಸ್ಯೆಗೆ ಸೂಕ್ತ ಪರಿಹಾರವೊಂದನ್ನು ಅನ್ವೇಷಿಸಬಲ್ಲ ವ್ಯಕ್ತಿತ್ವ ಅವರದ್ದಾಗಿತ್ತು. ತಾವೂ ಸಾಹಸಶೀಲರಾಗಿದ್ದರಲ್ಲದೆ, ಉಳಿದವರಲ್ಲೂ ಸಾಹಸದ ಪ್ರವೃತ್ತಿಯನ್ನು ಬೆಳೆಸುವ ಪ್ರೇರಕಶಕ್ತಿ ಅವರಲ್ಲಿತ್ತು. ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನಲ್ಲಿದ್ದಾಗ, ಹತ್ತು ಹಲವು ಪ್ರತಿಭಟನೆ, ಧರಣಿ, ಹೋರಾಟ ನಡೆಸುತ್ತಿದ್ದಾಗಲೂ ಇವರ ವ್ಯಕ್ತಿತ್ವ ಎದ್ದು ಕಾಣುವಂತಿತ್ತು. ಹಣವಿಲ್ಲದಿದ್ದರೂ ಕುಗ್ಗದ ಮನಸ್ಥಿತಿ ನಾಯಕತ್ವದ ಮತ್ತೊಂದು ವಿಶೇಷ ಗುಣ. ಸಂಪನ್ಮೂಲಗಳನ್ನು ಹೇಗೋ ಹೊಂದಿಸಿಕೊಳ್ಳುವ ಭರವಸೆ ನಾಯಕನಲ್ಲಿರಬೇಕು. ಯಾವುದಾದರೂ ಊರಿಗೆ ಹೋಗಬೇಕೆಂದರೆ ಅಲ್ಲಿಗೆ ಹೋಗುವುದರ ಕಡೆಯೇ ಗಮನ. ಬಸ್ಸಾದರೂ ಸರಿ, ಲಾರಿಯಾದರೂ ಸರಿ. ಹತ್ತೆಂಟು ಕಿ.ಮೀ. ಸಮೀಪವಿದ್ದರೆ ನಡೆಯಲೂ ಸಿದ್ಧ. ವಾಪಸ್ ಬರಲು ಹಣವಿಲ್ಲ ಎಂದು ಹೋಗುವ ಯೋಚನೆಯನ್ನೇ ಕೈಬಿಡುವುದು ಹೇಗೆ? ಎಂಬುದು ಅನಂತಕುಮಾರರ ಪ್ರಶ್ನೆಯಾಗಿತ್ತು. ಗುರಿ ತಲುಪಲು ಸುಲಲಿತ ವ್ಯವಸ್ಥೆ ಇರಬೇಕು ಎಂಬುದರತ್ತ ಅವರು ಹೆಚ್ಚು ಗಮನ ನೀಡುತ್ತಿರಲೇ ಇಲ್ಲ ಯಾವುದೋ ಅಭ್ಯಾಸವರ್ಗವಿರಲಿ. ರಾಷ್ಟ್ರೀಯ ಸಮ್ಮೇಳನವೇ ಇರಲಿ. ಕಾರ್ಯಕ್ರಮದ ರೂಪುರೇಷೆಯೂ ಸಾಕಷ್ಟು ಮೊದಲೇ ಸಿದ್ಧವಾಗಬೇಕು. ಸಭಾಂಗಣ ವ್ಯವಸ್ಥೆ, ಮುಖ್ಯ ಅತಿಥಿಗಳು, ಅವರ ಪ್ರಯಾಣ ವ್ಯವಸ್ಥೆ, ಸ್ವಯಂಸೇವಕರು, ಧ್ವನಿವರ್ಧಕ ವ್ಯವಸ್ಥೆ, ಭಾಗವಹಿಸುವ ವಿದ್ಯಾರ್ಥಿಗಳು, ಅವರ ಪ್ರಯಾಣ ವ್ಯವಸ್ಥೆ, ಮುಂತಾದ ಎಲ್ಲ ವಿವರಗಳು ಒಂದೂ ಬಿಡದಂತೆ ಅವರ ಅವಗಾಹನೆಗೆ ಬಂದು ನಿಶ್ಚಯವಾಗಿಬಿಡಬೇಕು. ಸಭೆಯಲ್ಲಿ ಮಂಡಿಸಬೇಕಾದ ನಿರ್ಣಯಗಳನ್ನೂ ಅವರೇ ಬರೆಯುತ್ತಿದ್ದರು.

**ಅಹಮಿಕೆಯಿಲ್ಲದ ನಾಯಕ:** ಒಬ್ಬ ನಾಯಕರಾಗಿ ಅನಂತಕುಮಾರ್ ಪ್ರವಾಸ ಕೈಗೊಳ್ಳುತ್ತಿದ್ದ ಬಗೆಯೂ ಅತಿ ವಿಶಿಷ್ಟವಾಗಿರುತ್ತಿತ್ತು. ಇತರ ಮುಖಂಡರು ಸಾಮಾನ್ಯವಾಗಿ ಮಾಡುವಂತೆ ಜಿಲ್ಲಾಕೇಂದ್ರಕ್ಕೋ, ತಾಲ್ಲೂಕು ಕೇಂದ್ರಕ್ಕೋ ಬಂದು ಎಲ್ಲ ವಿದ್ಯಾರ್ಥಿ ಕಾರ್ಯಕರ್ತರನ್ನು ಅಲ್ಲಿಗೇ ಕರೆಸಿ ಮಾತನಾಡಿಸಿ ಕಳುಹಿಸದೆ, ಅವರು ಇರುವಲ್ಲಿಗೇ ಹೋಗಿ ಮಾತನಾಡಿಸುವಂಥವರು ಅನಂತಕುಮಾರ್. ಇಂತಹ ನಾಯಕರು ತಮ್ಮ ಮನೆಯವರೆಗೂ ಬಂದರಲ್ಲ ಎಂಬ ಅಚ್ಚರಿ ಒಂದೆಡೆಯಾದರೆ, ತಮ್ಮಂತಹ ಸಣ್ಣ ಕಾರ್ಯಕರ್ತರಿಗೂ ಇವರು ಗೌರವ ನೀಡುತ್ತಾರಲ್ಲ, ತಾನು ಪಕ್ಷದ ದೊಡ್ಡ ಹುದ್ದೆಯಲ್ಲಿರುವ ನಾಯಕ ಎಂಬ ಅಹಂ ಇಲ್ಲವಲ್ಲ ಎಂಬ ಅಭಿಮಾನ ಕಾರ್ಯಕರ್ತರಲ್ಲಿ ಮೂಡುತ್ತಿತ್ತು. ಹೀಗಾಗಿ, ಕಾರ್ಯಕರ್ತರಿಗೆ ಅನಂತಕುಮಾರ್ ನೆಚ್ಚಿನ ನಾಯಕರೇ ಆಗಿದ್ದರು.

ಪುಟ 6 ರಲ್ಲಿ ಮುಂದುವರೆದಿದೆ

# ಗ್ರಾಮೀಣ ಮಹಿಳೆಯರಿಗೆ ನೇತೃತ್ವ ವಿಕಸನ ಶಿಬಿರ



ಅನಂತಕುಮಾರ್ ಪ್ರತಿಷ್ಠಾನವು ಅದಮ್ಯ ಚೇತನ ಸಂಸ್ಥೆಯ ಸಹಯೋಗದಲ್ಲಿ ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ಗ್ರಾಮ ಪಂಚಾಯತಿ ಸದಸ್ಯೆಯರು ಹಾಗೂ ಗ್ರಾಮೀಣ ಭಾಗದ ಮಹಿಳೆಯರಿಗಾಗಿ ನೇತೃತ್ವ ವಿಕಸನ ಶಿಬಿರವನ್ನು ಏರ್ಪಡಿಸಿತ್ತು. ಜೂನ್ ತಿಂಗಳ 16, 17 ಮತ್ತು 18 ರಂದು ಜರುಗಿದ 'ಗ್ರಾಮ ಚೇತನ' ಎಂಬ ಹೆಸರಿನ ಈ ಶಿಬಿರದಲ್ಲಿ ಹುಬ್ಬಳ್ಳಿ ತಾಲೂಕಿನ ವಿವಿಧ ಗ್ರಾಮಗಳ ಪಂಚಾಯತಿ ಸದಸ್ಯೆಯರೂ ಸೇರಿದಂತೆ ಗ್ರಾಮೀಣ ಭಾಗದ 28 ಮಹಿಳೆಯರು ಭಾಗವಹಿಸಿದ್ದರು.

ಹುಬ್ಬಳ್ಳಿ- ಧಾರವಾಡ ಉಪಮಹಾಪೌರರಾದ ಶ್ರೀಮತಿ ಉಮಾ ಮುಕುಂದ್, ಜೂನ್ 16 ರಂದು ಗ್ರಾಮ ಚೇತನ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತ ಅನಂತಕುಮಾರ್ ಪ್ರತಿಷ್ಠಾನದ ಚಟುವಟಿಕೆಗಳನ್ನು ಪ್ರಶಂಸಿಸಿದರು. ಮಹಿಳೆಯರು ಧೈರ್ಯದಿಂದ ಮುಂದೆ ಬರಬೇಕು, ಅವರು ನಾಯಕತ್ವವಹಿಸಿ ಮುಂದೆ ಬಂದಾಗ ಮಾತ್ರ ಗ್ರಾಮೀಣಾಭಿವೃದ್ಧಿ ಸಾಧ್ಯವಾಗುತ್ತದೆ, ಈ ನಿಟ್ಟಿನಲ್ಲಿ ಈ ಶಿಬಿರ ಸ್ವಾಗತಾರ್ಹ ಎಂದು ಹೇಳಿದರು.ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ವಿಷ್ಣುಕಾಂತ್ ಚಟಪಲ್ಲಿಯವರು ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಸ್ವರಾಜ್ಯ ಕಲ್ಪನೆಯ ಬಗ್ಗೆ ಶಿಬಿರಾರ್ಥಿಗಳಿಗೆ ವಿವರವಾದ ಮಾಹಿತಿ ಒದಗಿಸಿದರು. ಪ್ರತಿಯೊಂದು ಗ್ರಾಮಕ್ಕೂ ತನ್ನದೇ ಆದ ಒಂದು ಇತಿಹಾಸವಿದೆ, ಇದನ್ನರಿತು ನಮ್ಮ ಗ್ರಾಮವು ಹೇಗಿರಬೇಕು ಎಂಬುದನ್ನು ನಾವೇ ನಿರ್ಧರಿಸಬೇಕು; ಆಗ ಮಾತ್ರ ಗ್ರಾಮದ ಅಭಿವೃದ್ಧಿಯಾಗುತ್ತದೆ ಎಂದೂ ಅವರು ಹೇಳಿದರು. ಅನಂತಕುಮಾರ್ ಪ್ರತಿಷ್ಠಾನದ ಕಾರ್ಯದರ್ಶಿಗಳಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಮಹಿಳೆಯರ ನಾಯಕತ್ವ ಮತ್ತು ನೇತೃತ್ವ ವಿಕಸನ ಶಿಬಿರದ ಅಗತ್ಯವನ್ನು ಕುರಿತು ತಿಳಿಸಿದರು. ಮಹಿಳೆಯರು ನಿರ್ಭೀತಿಯಿಂದ ಎಲ್ಲ ಕ್ಷೇತ್ರದಲ್ಲಿಯೂ ಕೆಲಸ ಮಾಡಲು ಮುಂದೆ ಬರಬೇಕು, ಅವರು ಮುಂದಾಳುತನ ವಹಿಸಿ ಕೆಲಸ ಮಾಡಿದಲ್ಲಿ ಗ್ರಾಮದ ವಿಕಾಸ ಯಶಸ್ವಿಯಾಗುತ್ತದೆ ಎಂದು ಹೇಳಿದರು. ಅದಮ್ಯ ಚೇತನವು ಪ್ರತಿಪಾದಿಸುವ ಹಸಿರು ಜೀವನ ಶೈಲಿಯ ಕುರಿತು ಹೆಚ್ಚಿನ ಮಾಹಿತಿಯನ್ನೂ ಅವರು ನೀಡಿದರು.

ಪುಟ 6 ರಲ್ಲಿ ಮುಂದುವರೆದಿದೆ

# ಕೋಲಾರ ಜಿಲ್ಲೆಯ ಕೆಲವು ದೇವಾಲಯಗಳು

ದೇಗುಲದರ್ಶನ ಮಾಲಿಕೆ - 24









ಅದಮ್ಯ ಚೇತನ ಅರ್ಪಿಸುವ ದೇಗುಲ ದರ್ಶನ ಮಾಲಿಕೆಯ 24 ನೇ ಕಾರ್ಯಕ್ರಮದಲ್ಲಿ ಕೋಲಾರ ಜಿಲ್ಲೆಯ ಮುಳಬಾಗಿಲು ಮತ್ತು ಸುತ್ತಲಿನ ಪ್ರದೇಶದ ಕೆಲವು ದೇವಾಲಯಗಳ ಪರಿಚಯ ಮಾಡಿಕೊಳ್ಳೋಣ.

ಕೋಲಾರ ಕುವಲಾಳಪುರವೆಂಬ ಹೆಸರಿನಿಂದ ಇತಿಹಾಸದಲ್ಲಿ ಪ್ರಸಿದ್ಧಿಪಡೆದಿದ್ದ ನಾಡು. ಗಂಗ, ಬಾಣ, ಚೋಳ, ಹೊಯ್ಸಳ, ವಿಜಯನಗರ ಮೊದಲಾದ ರಾಜವಂಶಗಳ ಆಳ್ವಿಕೆಗೆ ಒಳಪಟ್ಟಿದ್ದ ಈ ಪ್ರಾಂತ್ಯವು ಆಯಾ ಕಾಲದಲ್ಲಿ ನಿರ್ಮಿಸಲಾದ ದೇವಾಲಯಗಳು, ವೀರಗಲ್ಲುಗಳು, ಶಾಸನಗಳೇ ಮೊದಲಾದ ದಾಖಲೆಗಳ ಮೂಲಕ ಗತವೈಭವವನ್ನು ಇಂದಿಗೂ ನಮ್ಮ ಕಣ್ಣೆದುರು ಪ್ರದರ್ಶಿಸುತ್ತಿದೆ.

ಕೋಲಾರದ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲೇ ಊರ ಹೊರಗಿನ ಕೊಂಡರಾಜನಹಳ್ಳಿಯಲ್ಲಿ ಆಂಜನೇಯನ ದೇವಾಲಯವೊಂದಿದೆ. ಸುಮಾರು 500 ವರುಷಗಳಷ್ಟು ಹಳೆಯದೆನ್ನಬಹುದಾದ ಇಲ್ಲಿನ ಶಿಲ್ಪವು ವಿಶಿಷ್ಟವಾಗಿದೆ. ಹನುಮಂತನು ಮೇಲೆತ್ತಿದ ಬಾಲವು ಶಿಖೆಯ ಮೇಲೆ ಕಾಣುವ ಪರಿ ಆಕರ್ಷಕವಾಗಿದೆ.

ಮುಳಬಾಗಿಲು ಸಮೀಪವಿರುವ ಆವನಿ ಕ್ಷೇತ್ರದೊಡನೆ ಪುರಾಣ ಸಂಬಂಧಿತವಾದ ಐತಿಹ್ಯಗಳೂ ಪ್ರಚಲಿತವಿವೆ. ಒಂಬತ್ತನೇ ಶತಮಾನದ ನೊಳಂಬರ ಆಳ್ವಿಕೆಯ ಕಾಲದಲ್ಲಿ ಇಲ್ಲಿ ತ್ರಿಭುವನ ಕರ್ತರನೆಂಬ ಸಂತನು ಅನೇಕ ಗುಡಿಗಳನ್ನು ಕಟ್ಟಿಸಿದ್ದ ಉಲ್ಲೇಖವಿದೆ. ರಾಮಲಿಂಗೇಶ್ವರ ದೇವಾಲಯ ಸಂಕೀರ್ಣದಲ್ಲಿ 1200 ವರುಷಗಳಿಗೂ ಹಿಂದಿನ ದೇವಾಲಯ ವಾಸ್ತುಶಿಲ್ಪದ ದರ್ಶನ ಲಭ್ಯವಾಗುತ್ತದೆ. ಇಲ್ಲಿನ ಹಲವು ಗುಡಿಗಳಲ್ಲಿ ಶ್ರೀರಾಮ, ಲಕ್ಷ್ಮಣ ಮತ್ತಿತರ ರಾಮಾಯಣಪಾತ್ರಗಳಿಂದ ಅರ್ಚಿತವಾದವೆನ್ನಲಾದ ಭವ್ಯ ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಹೊರಗೋಡೆಗಳ ಮೇಲಿರುವ ದುರ್ಗೆ, ಶಿವ, ತಪಸ್ವಿಗಳೇ ಮೊದಲಾದ ಶಿಲ್ಪಗಳು ಆಸಕ್ತಿಮೂಡಿಸುತ್ತವೆ.

ಆವನಿಯ ಸಮೀಪದಲ್ಲಿರುವ ವಿರೂಪಾಕ್ಷಿ ವಿಜಯನಗರ ಕಾಲದ ಒಂದು ದೊಡ್ಡ ದೇವಾಲಯ. ಕಟ್ಟಡದ ಭವ್ಯತೆಗೆ ಹೋಲಿಸಿದರೆ, ಶಿವಲಿಂಗ ಆಕಾರದಲ್ಲಿ ಚಿಕ್ಕದು. ನಿತ್ಯಪೂಜಾದಿಗಳು ಸಾಂಗವಾಗಿ ನಡೆಯುತ್ತಿವೆ. ತಾಲೂಕು ಕೇಂದ್ರವಾದ ಮುಳಬಾಗಿಲಿನಲ್ಲಿ ಅನೇಕ ದೇವಾಲಯಗಳಿವೆ. ಇವುಗಳಲ್ಲಿ ಬಹು ಪ್ರಸಿದ್ಧವಾದುದು ಆಂಜನೇಯನ ದೇವಾಲಯ. ವಿಜಯನಗರ ಕಾಲಕ್ಕೆ ಸೇರಿದ ಈ ಗುಡಿಯಲ್ಲಿ ಭವ್ಯವಾದ ಆಂಜನೇಯನ ಶಿಲ್ಪವಲ್ಲದೆ, ವೆಂಕಟೇಶ್ವರ, ಸೀತಾರಾಮ ಮೊದಲಾದ ದೇವತಾಶಿಲ್ಪಗಳೂ ಇವೆ.





ಒಂದು ಕಂಬದ ಮೇಲೆ, ದೇಗುಲದ ನಿರ್ಮಾತೃವೆನ್ನಲಾದ ಶ್ರೀ ಕೃಷ್ಣದೇವರಾಯನ ಶಿಲ್ಪವನ್ನೂ ಕಾಣಬಹುದು. ವಿಜಯನಗರ ಕಾಲಕ್ಕೆ ಸೇರಿದ ಇನ್ನೂ ಕೆಲವು ದೇವಾಲಯಗಳನ್ನು ಸುತ್ತಲಿನ ಗ್ರಾಮಗಳಲ್ಲಿ ಕಾಣಬಹುದು. ಇಂತಹ ಅನೇಕ ದೇವಾಲಯಗಳನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿರುವುದು ಸಮಾಧಾನದ ಸಂಗತಿ. ಕಪ್ಪಲಮಡುಗು ದೇವಾಲಯದಲ್ಲಿ ನೀಳಾದೇವಿ ಸೌಮ್ಯನಾಯಕಿಯರೊಡಗೂಡಿದ ಚನ್ನಕೇಶವ ದೇವರ ಶಿಲ್ಪ ಸುಂದರವಾಗಿದೆ. ಬೈರಕೂರಿನಲ್ಲಿ ಸೀತಾಲಕ್ಷ್ಮಣ ಸಮೇತ ಕೋದಂಡರಾಮನ ವಿಗ್ರಹ ಭವ್ಯವಾಗಿದೆ. ಆಂಜನೇಯನ ಗುಡಿ ಪ್ರತ್ಯೇಕವಾಗಿದೆ. ಗುಡಿಪಲ್ಲಿಯಲ್ಲಿ ತೀರಾ ಹಾಳುಬಿದ್ದ ಸ್ಥಿತಿಯಲ್ಲಿದ್ದ ಸೋಮೇಶ್ವರ ಗುಡಿಯನ್ನು ಸ್ಥಳೀಯರ ಸಹಕಾರದೊಡನೆ ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್ ಪುನರ್ನಿರ್ಮಿಸಿರುವುದು ಪ್ರಶಂಸನೀಯ. ಇಲ್ಲಿಯೇ ಸಪ್ತಮಾತೃಕೆ, ಆಂಜನೇಯ ಮತ್ತು ವಿಶ್ವೇಶ್ವರ ದೇವಾಲಯಗಳೂ ಇವೆ.

ಪುರಾಣಗಳಲ್ಲಿ ಕೂಟಾದ್ರಿ, ಕೂಡುಮಲೆ ಎಂದು ಹೆಸರು ಪಡೆದಿದ್ದ ಕುರುಡುಮಲೆಯ ಗಣಪತಿಯ ವಿಗ್ರಹ ಭವ್ಯವೂ ವಿಶಿಷ್ಟವೂ ಆದುದು. 14 ಅಡಿ ಎತ್ತರದ ಕರಿಶಿಲೆಯ ವಿಗ್ರಹ ಕಣ್ತುಂಬುವಂತಿದೆ. ನಡುಮಂಟಪದ ಕಂಬಗಳ ಮೇಲಿನ ಕೆತ್ತನೆಯೂ ಆಕರ್ಷಕ. ರಾಮಾಯಣ, ಶಿವಲೀಲೆ, ಗಣೇಶನ ವಿವಿಧ ರೂಪಗಳನ್ನು ಇಲ್ಲಿ ಕಾಣಬಹುದು. ಪಕ್ಕದ ಗುಡ್ಡವೇರುವ ಹಾದಿಯಲ್ಲಿರುವ ಚನ್ನಕೇಶವ ದೇವಾಲಯವನ್ನು ಇತ್ತೀಚೆಗೆ ನವೀಕರಿಸಲಾಗಿದೆ. ಕುರುಡುಮಲೆಯ ಸೋಮೇಶ್ವರ ದೇವಾಲಯವು ಹೊಯ್ಸಳ ಸಾಮಂತ ಇಳವಂಜಿರಾಯನ ಆಳ್ವಿಕೆಯ ಕಾಲದ್ದೆನ್ನಲಾಗಿದೆ (13ನೇ ಶತಮಾನ). ಕಟ್ಟಡದ ಹೊರಭಿತ್ತಿ, ನಂದಿಮಂಟಪ, ಕಂಬಗಳ ಮೇಲಿನ ಉಬ್ಬುಶಿಲ್ಪಗಳಲ್ಲಿ ಶಿವನ ಲೀಲಾಮೂರ್ತಿಗಳು ಆಕರ್ಷಕವಾಗಿವೆ.

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**
LINK- http://YouTube.com/AnanthkumarPratishthana

# ಅನಂತಯಾನ ಅಧ್ಯಾಯ- 13 ಕಾಲೊನಿಯಲ್ಲಿ ರಾಮನವಮಿ

**ನಿರೂಪಣೆ : ಟಿ.ಎಸ್. ಗೋಪಾಲ್**

ಎಂ ಟಿ ಎಸ್ ಕಾಲೊನಿಯ ನಡುವೆ ದೊಡ್ಡದೊಂದು ಬಯಲು. ಅದರ ಮಧ್ಯೆ ಎತ್ತರವಾದ ಒಂದು ಹರವು. ಈ ಪ್ರಾಂಗಣವು ಸಭೆಗಳನ್ನು ನಡೆಸಲು ಲಾಯಕ್ಕಾದ ವೇದಿಕೆಯಾಗಿತ್ತು. ಕಾಲೊನಿಯವರೆಲ್ಲ ಸೇರಿ ವರ್ಷದಲ್ಲಿ ಎರಡು ಸಲ ಅಂದರೆ ಜನವರಿ ೨೬ ಮತ್ತು ಆಗಸ್ಟ್ ೧೫ ಈ ದಿನಗಳ ರಾಷ್ಟ್ರೀಯ ಹಬ್ಬಗಳನ್ನು ಇಲ್ಲಿ ಸಾಮೂಹಿಕವಾಗಿ ಆಚರಿಸುತ್ತಿದ್ದರು. ಇಲ್ಲಿ ಆಚರಣೆಯಾಗುತ್ತಿದ್ದ ಇನ್ನೊಂದು ಹಬ್ಬ ಬಸವಜಯಂತಿ. ಗಿರಿಜಾಶಾಸ್ತ್ರಿಯವರ ನೇತೃತ್ವದಲ್ಲಿ ಕಾಲೊನಿಯ ಮಹಿಳೆಯರ ಸಮೂಹವಾದ ದೇವಿ ಗ್ರೂಪ್ ಆಚರಿಸುತ್ತಿದ್ದ ನವರಾತ್ರಿ ಉತ್ಸವ ಆಗುತ್ತಿದ್ದುದೂ ಇಲ್ಲೇ.

ಇವೆಲ್ಲ ಧಾರ್ಮಿಕ ಕಾರ್ಯಕ್ರಮಗಳಲ್ಲಿ ನಾರಾಯಣ ಶಾಸ್ತ್ರಿಯವರೂ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದರು. ಆದರೆ ರಾಜಕೀಯ, ಸಾಮಾಜಿಕ ಚಟುವಟಿಕೆಗಳಲ್ಲಿ ಅವರು ನಿರಾಸಕ್ತರೇ. ಅವೆಲ್ಲವನ್ನೂ ತಮ್ಮ ಪತ್ನಿಗೆ ವಹಿಸಿಕೊಟ್ಟು ನಿಶ್ಚಿಂತರಾದಂತಿತ್ತು. ಇತರ ಚಟುವಟಿಕೆಗಳು ಹಾಗಿರಲಿ, ಶಾಸ್ತ್ರಿಗಳ ಸ್ನೇಹವಲಯವೂ ತೀರಾ ಸೀಮಿತವಾಗಿತ್ತು. ಸ್ನೇಹಿತರ ಸಂಖ್ಯೆಯೂ ಕೈಬೆರಳೆಣಿಕೆ ಮೀರದಷ್ಟು ಮಾತ್ರವೇ. ಉಳಿದಂತೆ ತಾವಾಯಿತು, ತಮ್ಮ ಕುಟುಂಬ, ತಮ್ಮ ಕೆಲಸ ಅಷ್ಟಕ್ಕೆ ಸೀಮಿತ.



**ರಾಮನವಮಿಯ ಸಡಗರದಲ್ಲಿ ಅನಂತಕುಮಾರನೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ. ಮಕ್ಕಳು ಅಭಿನಯಿಸುತ್ತಿದ್ದ ನಾಟಕಗಳಲ್ಲೂ ಅನಂತಕುಮಾರನ ಮುಖ್ಯಪಾತ್ರವೊಂದು ಇದ್ದೇ ಇರುತ್ತಿತ್ತು.**

ಸ್ವಾತಂತ್ರ್ಯ ಬರುವ ಮೊದಲು ಬ್ರಿಟಿಷರು ಹುಬ್ಬಳ್ಳಿಯಲ್ಲಿ ರೈಲ್ವೇ ವರ್ಕ್ ಶಾಪ್ ಪ್ರಾರಂಭಿಸಿದ್ದರು. ಆಗ ವಿದೇಶೀಯ ಅಧಿಕಾರಿಗಳಿಗಾಗಿ ಆಂಗ್ಲೋ ಇಂಡಿಯನ್ ಇನ್ಸ್ಟಿಟ್ಯೂಟ್ ಎಂಬುದು ಒಂದು ಕಟ್ಟಡದಲ್ಲೂ ಭಾರತೀಯ ಉದ್ಯೋಗಿಗಳಿಗಾಗಿ ಇಂಡಿಯನ್ ಇನ್ಸ್ಟಿಟ್ಯೂಟ್ ಎಂಬ ಸಂಘವು ಇನ್ನೊಂದು ಕಟ್ಟಡದಲ್ಲೂ ಚಟುವಟಿಕೆ ನಡೆಸಿಕೊಂಡಿದ್ದವು. ದೇಶಕ್ಕೆ ಸ್ವಾತಂತ್ರ್ಯ ಬಂದು ಬ್ರಿಟಿಷರು ಹೊರಟುಹೋದಮೇಲೆ ಎರಡೂ ಸಂಘಗಳ ಹೆಸರು ಬದಲಿಸಿ ನಾರ್ತ್ ಇನ್ಸ್ಟಿಟ್ಯೂಟ್ ಹಾಗೂ ಸೌತ್ ಇನ್ಸ್ಟಿಟ್ಯೂಟ್ ಎಂದು ನಾಮಕರಣ ಮಾಡಲಾಯಿತು. ೧೯೫೦ರ ಪ್ರಾರಂಭದಲ್ಲಿ ಪಿ. ಕೃಷ್ಣಮೂರ್ತಿ ಎಂಬ ಮಹಾಶಯರು ಶ್ರೀರಾಮ ಪರಿವಾರದ ದೊಡ್ಡದೊಂದು ಚಿತ್ರಕ್ಕೆ ಕಟ್ಟುಹಾಕಿಸಿ ತಂದು ಸೌತ್ ಇನ್ಸ್ಟಿಟ್ಯೂಟ್ ಕಟ್ಟಡದಲ್ಲಿ ಇರಿಸಿದರು. ಪ್ರತಿವರ್ಷ ರಾಮನವಮಿಯ ಸಂದರ್ಭದಲ್ಲಿ ಕೆಲವು ದಿನ ವಿಶೇಷ ಪೂಜೆಪುನಸ್ಕಾರಗಳನ್ನು ಏರ್ಪಡಿಸಿ ನಡೆಸುತ್ತ ಬಂದರು. ಮುಂದೆ ರೈಲ್ವೆ ಇಲಾಖೆಯ ವಿವಿಧ ವಿಭಾಗಗಳ ಉದ್ಯೋಗಿಗಳು ಕಾಲೊನಿಯಲ್ಲಿ ವಸತಿ ಹೂಡಿದ ಮೇಲೆ ರಾಮನವಮಿಯ ಕಾರ್ಯಕ್ರಮಗಳು ಕಾಲೊನಿಗೇ ವರ್ಗಾವಣೆಗೊಂಡವು. ೧೯೫೫ರ ನಂತರ ಎಂ ಟಿ ಎಸ್ ಕಾಲೊನಿಯ ಈ ಕಾರ್ಯಕ್ರಮಗಳು ವಿಶೇಷರೂಪ ಪಡೆದು ನಾಡಿನಾದ್ಯಂತ ಪ್ರಸಿದ್ಧಿಪಡೆಯುವಂತಾಯಿತು.

ತಮಿಳರೇ ಬಹುಸಂಖ್ಯೆಯಲ್ಲಿದ್ದ ರೈಲ್ವೇ ಉದ್ಯೋಗಿ ಬಳಗದಲ್ಲಿ ರಾಮನವಮಿ ಕಾರ್ಯಕ್ರಮದ ಬಗೆಗೆ ಅಪಸ್ವರವೂ ಬಾರದಿರಲಿಲ್ಲ. ಡಿಎಂಕೆ ಪ್ರಭಾವದಿಂದ ಪೀಡಿತರಾಗಿದ್ದ ಹಲವರು ತಮಿಳರು, "ಮರೆಯಲ್ಲಿ ಬಚ್ಚಿಟ್ಟುಕೊಂಡು ವಾಲಿಯನ್ನು ಕೊಂದ ರಾಮನ ಕೊಂಡಾಟ ಎಷ್ಟರಮಟ್ಟಿಗೆ ಸರಿ? " ಎಂದು ಕೂಗೆಬ್ಬಿಸಿದರು. ಮುಗ್ಧರಾದ ಹುಬ್ಬಳ್ಳಿಯ ಜನತೆಗೆ ಇವರ ವರ್ತನೆ ವಿಚಿತ್ರವಾಗಿ ಕಂಡಿತು. ಅವರ್ಯಾರಿಗೂ ಈ ಅಪವಾದ ಅರ್ಥವೂ ಆಗಲಿಲ್ಲ; ಯಾರೂ ತಲೆಕೆಡಿಸಿಕೊಳ್ಳಲೂ ಇಲ್ಲ.

ತಮಿಳರ ಅಪಸ್ವರ ಹೇಗಾದರೂ ಇರಲಿ. ಕಾಲೊನಿಯ ರಾಮನವಮಿ ಆಚರಣೆಗಳಲ್ಲೇನೋ ಸರ್ವಧರ್ಮೀಯರ ಪಾಲೂ ಇತ್ತು. ಶಾಸ್ತ್ರಿಗಳ ಸಹೋದ್ಯೋಗಿ ಮುಸ್ಲಿಮನೊಬ್ಬ ಹನುಮಂತನ ಕಟ್ಟಾಭಕ್ತ. ಪ್ರತಿ ಅಮಾವಾಸ್ಯೆಗೆ ಹನುಮನ ಗುಡಿಗೆ ಹೋಗುತ್ತಿದ್ದ ಆತ ಹನುಮಂತನ ಬಗೆಗೆ ಅನೇಕ ಹಿಂದೂಗಳಿಗಿಂತಲೂ ಚೆನ್ನಾಗಿ ತಿಳಿದುಕೊಂಡಿದ್ದ. ಕಾಲೊನಿಯಲ್ಲಿದ್ದ ಮುಸ್ಲಿಂ ಕುಟುಂಬವೊಂದು ರಾಮಾಯಣದ ಬಗೆಗೆ ಅಪಾರ ಆಸಕ್ತಿಹೊಂದಿತ್ತು. ವಿವಿಧ ವೇಷಸ್ಪರ್ಧೆಯಲ್ಲಿ ಅವರ ಮನೆಹುಡುಗನಿಗೆ ರಾಮನ ಪಾತ್ರ ಹಾಕಿ ಮೆರೆಸುತ್ತಿದ್ದರು. ರಾಮನವಮಿಯ ಅನ್ನದಾನಕ್ಕೆ ಬೇಕಾಗುವಷ್ಟು ಸೌದೆಯನ್ನು ಉಚಿತವಾಗಿ ಪೂರೈಸುತ್ತಿದ್ದವನೂ ಒಬ್ಬ. ಸಭೆ ಕರೆದಾಗಲೆಲ್ಲ ಯಾರೋ ಒಬ್ಬರು 'ಇದೇ ಸಮಿತಿ ಮುಂದುವರೆಯತಕ್ಕದ್ದು' ಎನ್ನುವರು; ಇನ್ನೊಬ್ಬರು 'ನಾನು ಅನುಮೋದಿಸುತ್ತೇನೆ' ಎಂದು ಒಗ್ಗರಣೆ ಹಾಕುವರು.

ಒಂಭತ್ತು ದಿನಗಳ ಉತ್ಸವದಲ್ಲಿ ಹಿರಿಯಕಿರಿಯರೆನ್ನದೆ ಕಾಲೊನಿಯಲ್ಲಿದ್ದವರೆಲ್ಲ ಉತ್ಸಾಹದಿಂದ ಪಾಲ್ಗೊಳ್ಳುವರು. ಅವರವರ ಕೈಲಾದಷ್ಟು ಹಣವನ್ನು ವಂತಿಗೆಯಾಗಿ ನೀಡುವರು. ತೀರಾ ಹೆಚ್ಚಿನ ಸಂಭಾವನೆಯನ್ನೇನೂ ಬಯಸದೆ ನಾಡಿನ ಖ್ಯಾತ ಸಂಗೀತಗಾರರೆಲ್ಲ ಈ ರಾಮನವಮಿಯ ಉತ್ಸವದಲ್ಲಿ ಪಾಲ್ಗೊಳ್ಳುವರು. ಈ ಉತ್ಸವದಲ್ಲಿ ಹಾಡಿರುವ ಸಂಗೀತಗಾರರಲ್ಲಿ ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್ಲ, ಬಸವರಾಜ ರಾಜಗುರು, ಮಲ್ಲಿಕಾರ್ಜುನ ಮನ್ಸೂರ್ ಮೊದಲಾದ ಖ್ಯಾತನಾಮರೆಲ್ಲರ ಹೆಸರುಗಳಿವೆ ಎಂದಮೇಲೆ ಈ ಉತ್ಸವ ಆ ಪ್ರಾಂತ್ಯದಲ್ಲೆಲ್ಲ ಪ್ರಸಿದ್ಧಿಪಡೆದುದರಲ್ಲಿ ಅಚ್ಚರಿಯೇನು?

ಬೆಂಗಳೂರಿನಿಂದ ಮಾಸ್ಟರ್ ಹಿರಣ್ಣಯ್ಯ ತಂಡದವರು ಬಂದು ಇಲ್ಲಿ ನಾಟಕಪ್ರದರ್ಶನ ಮಾಡಿದುದು ಇನ್ನೊಂದು ಹೆಗ್ಗಳಿಕೆ. ಹಾಗೆ ಬಂದಿದ್ದಾಗೊಮ್ಮೆ ಹಿರಣ್ಣಯ್ಯನವರು ನಾರಾಯಣ ಶಾಸ್ತ್ರಿಯವರ ಮನೆಗೂ ಬಂದು ಭೋಜನ ಸ್ವೀಕರಿಸಿದ್ದರು. ಗಿರಿಜಾ ಶಾಸ್ತ್ರಿಯವರ ಅತಿಥಿ ಸತ್ಕಾರಕ್ಕೆ ಸಂತೋಷಪಟ್ಟು "ನೀನು ಸಾಕ್ಷಾತ್ ಅನ್ನಪೂರ್ಣೆ ಕಣಮ್ಮ" ಎಂದು ಕೊಂಡಾಡಿದ್ದರು.

ಈ ಪ್ರಾಂತ್ಯದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೇ ಪ್ರಾಶಸ್ತ್ಯ. ರಾಮನವಮಿ ಎಂದಮೇಲೆ ಕರ್ನಾಟಕ ಸಂಗೀತ ಬೇಡವೇ ಎಂದು ಹನುಮಂತರಾಯರ ಕೊರಗು. ಕರ್ನಾಟಕ ಸಂಗೀತದ ಒಂದೆರಡು ಕಾರ್ಯಕ್ರಮಗಳೂ ಇರಲಿ ಎಂದು ನಿರ್ಧರಿಸಿದ್ದಾಯಿತು. ಆದರೆ, ಸ್ಥಳೀಯರಿಗೆ ಇಷ್ಟವಾಗುವ ದಾಸರ ಪದಗಳನ್ನೇ ಹಾಡುವಂತೆ ಕೇಳಿಕೊಳ್ಳತಕ್ಕದ್ದು ಎಂದು ಯೋಚಿಸಿಕೊಂಡರು. ಹನುಮಂತರಾವ್ ಅವರೇ ಖುದ್ದಾಗಿ ಬೆಂಗಳೂರಿನ ಖ್ಯಾತ ಸಂಗೀತಗಾರ ಆರ್.ಕೆ. ಶ್ರೀಕಂಠನ್ ಅವರನ್ನು ಸಂಪರ್ಕಿಸಿದರು.

ರಾಮನವಮಿ ಉತ್ಸವದಲ್ಲಿ ಬಂದು ಹಾಡುವುದಕ್ಕೆ ಶ್ರೀಕಂಠನ್ ಒಪ್ಪಿಕೊಂಡರು . ಆದರೆ ದಾಸರ ಪದಗಳನ್ನೇ ಹಾಡಬೇಕೆಂಬ ಷರತ್ತನ್ನು ತಳ್ಳಿಹಾಕಿದರು. ದಾಸರ ಪದಗಳನ್ನೇ ಹಾಡಬೇಕೆಂದಿದ್ದರೆ ಯಾರಾದರೂ ಹರಿಕಥೆದಾಸರನ್ನು ಕರೆಸಿ ಹಾಡಿಸಿಕೊಳ್ಳಿ. ಕರ್ನಾಟಕ ಸಂಗೀತಕ್ಕೆ ಒಂದು ಶಾಸ್ತ್ರೀಯವಾದ ತಳಹದಿಯಿದೆ, ಕ್ರಮವಿದೆ, ಅದರ ಪ್ರಕಾರವೇ ಹಾಡತಕ್ಕದ್ದು ಎಂದು ಸ್ಪಷ್ಟಪಡಿಸಿದರು. ಅದರಂತೆಯೇ ಶ್ರೀಕಂಠನ್ ಬಂದು ಹಾಡಿದ್ದೂ ಆಯಿತು, ಜನರೆಲ್ಲ ಕೇಳಿ ಸಂತೋಷಪಟ್ಟಿದ್ದೂ ಆಯಿತು. ಮುಂದಿನ ವರ್ಷಗಳಲ್ಲಿ ರಾಮನವಮಿ ಸಂಗೀತೋತ್ಸವದಲ್ಲಿ ಕರ್ನಾಟಕ ಸಂಗೀತದ ಒಂದೆರಡು ಕಾರ್ಯಕ್ರಮಗಳೂ ಸ್ಥಾನ ಪಡೆದವು.

ಹೀಗೆ ಮಹಾನ್ ಸಂಗೀತಗಾರರೆಲ್ಲ ಎಂ ಟಿ ಎಸ್ ಕಾಲೊನಿಯ ರಾಮನವಮಿ ಉತ್ಸವಕ್ಕೆ ಬರುತ್ತಿದ್ದರಲ್ಲ, ಅವರಿಗೆಲ್ಲ ಗೌರವಧನ ಕೊಡಬೇಕಾಗಿತ್ತು. ಸೆಕೆಂಡ್ ಕ್ಲಾಸ್ ರೈಲ್ವೆ ಟಿಕೆಟ್ ಆದರೂ ಕೊಡಬೇಕಿತ್ತು. ಸಾಕಷ್ಟು ಹಣ ವೆಚ್ಚವಾಗುವ ಬಾಬ್ತು. ಕಾಲೊನಿಯಲ್ಲಿದ್ದವರೆಲ್ಲ ಮಧ್ಯಮ ಇಲ್ಲವೇ ಕೆಳ ಮಧ್ಯಮ ವರ್ಗದವರೇ. ಆದರೆ ಎಲ್ಲರೂ ಸಂತೋಷದಿಂದ ತಾವು ಕೂಡಿಟ್ಟ ಹಣದಲ್ಲಿ ಒಂದಿಷ್ಟು ಭಾಗ ಉಳಿಸಿ ರಾಮೋತ್ಸವದ ಖರ್ಚಿಗೆಂದು ಕೊಡುವರು. ಪ್ರತಿ ದಿನದ

ಪುಟ 4 ರಲ್ಲಿ ಮುಂದುವರೆದಿದೆ



ಪುಟ 3 ರಿಂದ ಕಾರ್ಯಕ್ರಮಕ್ಕೆ ನಗರದ ಎಲ್ಲೆಡೆಯಿಂದ ಜನರು ಬಂದು ಸೇರುತ್ತಿದ್ದರು. ಆವರಣದಲ್ಲಿ ಒಂದಿಷ್ಟೂ ಜಾಗ ಖಾಲಿಯಿಲ್ಲದಂತೆ ಜನ ತುಂಬಿರುತ್ತಿದ್ದರು. ಹೇಗೋ ಹಣವನ್ನು ಕೂಡಿಸಿ ಸಾಧ್ಯವಾದಷ್ಟು ವಿಜೃಂಭಣೆಯಿಂದಲೇ ಸಮಿತಿಯವರು ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು.

ಎಲ್ಲವೂ ಸಂಗೀತ ಕಾರ್ಯಕ್ರಮಗಳೇ ಎಂದೇನಿಲ್ಲ. ಮಾಸ್ಟರ್ ಹಿರಣ್ಣಯ್ಯನವರು ಬೆಂಗಳೂರಿನಿಂದ ತಮ್ಮ ತಂಡದೊಡನೆ ಬಂದು ನಾಟಕವೊಂದನ್ನು ಪ್ರದರ್ಶಿಸಿದುದನ್ನು ಹಿಂದೆಯೇ ಹೇಳಿದೆ. ಮಕ್ಕಳ ಪ್ರತಿಭಾ ಪ್ರದರ್ಶನಕ್ಕಾಗಿಯೂ ದಿನವೊಂದನ್ನು ಮೀಸಲಾಗಿರಿಸುತ್ತಿದ್ದರು. ಭರತನಾಟ್ಯ, ಏಕಪಾತ್ರಾಭಿನಯ, ಗೀತಗಾಯನ ಮೊದಲಾದ ಕಾರ್ಯಕ್ರಮಗಳನ್ನು ಪ್ರತಿಭಾನ್ವಿತ ಮಕ್ಕಳು ನಡೆಸಿಕೊಡುತ್ತಿದ್ದರು. ಇವರಲ್ಲಿ ಹೊರಗಿಂದ ಬಂದ ಬಾಲಪ್ರತಿಭೆಗಳ ಜೊತೆಗೆ ಕಾಲೊನಿಯಲ್ಲಿದ್ದ ಕೆಲವು ಮಕ್ಕಳೂ ಭಾಗವಹಿಸುತ್ತಿದ್ದರು. ಇವೆಲ್ಲ ಕಾರ್ಯಕ್ರಮಗಳಲ್ಲಿ ಅನಂತಕುಮಾರನೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ. ಮಕ್ಕಳು ಅಭಿನಯಿಸುತ್ತಿದ್ದ ನಾಟಕಗಳಲ್ಲೂ ಅನಂತನ ಮುಖ್ಯಪಾತ್ರವೊಂದು ಇದ್ದೇ ಇರುತ್ತಿತ್ತು. ಈ ಸಮಾರಂಭಗಳಲ್ಲಿ ಪ್ರದರ್ಶಿತವಾಗುತ್ತಿದ್ದ ಅನೇಕ ನಾಟಕಗಳನ್ನು ಗಿರಿಜಾಶಾಸ್ತ್ರಿಯವರೇ ನಿರ್ದೇಶಿಸುತ್ತಿದ್ದರು. ಉಳಿದ ಮಕ್ಕಳೊಡನೆ ತಮ್ಮ ಮಕ್ಕಳಿಗೂ ಅಭಿನಯವನ್ನು ಹೇಳಿಕೊಟ್ಟು ವೇದಿಕೆಯ ಮೇಲೆ ತಮ್ಮ ಪ್ರತಿಭೆ ತೋರುವಂತೆ ಅವರು ಪ್ರೋತ್ಸಾಹಿಸುತ್ತಿದ್ದರು. ಹೀಗಾಗಿ ಅನಂತಕುಮಾರನ ವಾಗ್ಮಿತೆ, ಕಲಾಪ್ರತಿಭೆಗಳು ಚಿಗುರೊಡೆಯಲು ರಾಮನವಮಿ ಕಾರ್ಯಕ್ರಮಗಳೂ ಪ್ರೇರಕವಾದವು.

ರಾಮನವಮಿಯ ಸಂಭ್ರಮವೆಲ್ಲ ಮುಗಿದ ನಂತರ ಬಾಲರಾಮನವಮಿ ಎಂಬ ವಿಶೇಷ ಕಾರ್ಯಕ್ರಮ ನಡೆಯುತ್ತಿತ್ತು. ಕಾಲೊನಿಯ ಮಕ್ಕಳಿಗೆಲ್ಲ ಇದೇ ಬಹು ನಿರೀಕ್ಷೆಯ ಕಾರ್ಯಕ್ರಮ. ಬಾಲನವಮಿ ಎಂದರೆ ದೊಡ್ಡವರಿಗೆ ಪ್ರವೇಶವಿಲ್ಲ ಎಂದಲ್ಲ. ಆದರೆ, ದೊಡ್ಡವರು ಇಲ್ಲಿ ಪೋಷಕಪಾತ್ರದವರು ಹಾಗೂ ಪ್ರೇಕ್ಷಕರು ಮಾತ್ರ. ವ್ಯವಸ್ಥೆ, ಪೂಜೆಪುನಸ್ಕಾರ, ಮೆರವಣಿಗೆ ಎಲ್ಲದರಲ್ಲೂ ಮಕ್ಕಳದ್ದೇ ಯಜಮಾನಿಕೆ.

ಕಾಲೊನಿಯ ಹುಡುಗರಲ್ಲಿ ರಾಘವೇಂದ್ರ ಕೃಷ್ಣಾಪುರ ಎಂಬ ಬಾಲಕನೊಬ್ಬನಿದ್ದ. ಅವನು ಶಾಸ್ತ್ರೋಕ್ತವಾಗಿ ಪೂಜಾಮಂತ್ರಗಳು, ವಿಧಿ, ವಿಧಾನಗಳು ಎಲ್ಲವನ್ನೂ ಸಾಕಷ್ಟು ಕಲಿತುಕೊಂಡಿದ್ದ. ಅವನ ನೇತೃತ್ವದಲ್ಲಿಯೇ ಬಾಲನವಮಿ ಕಾರ್ಯಕ್ರಮ ಜರುಗುವುದು. ಕಾಲೊನಿಯ ಹಿರಿಯರಲ್ಲಿ ಒಬ್ಬರಾದ ಶ್ರೀ ಕಟ್ಟಿಯವರು ತಮ್ಮ ಮನೆಯ ದೊಡ್ಡದೊಂದು ಕೊಠಡಿಯನ್ನೇ ಈ ಪೂಜಾಕಾರ್ಯಕ್ರಮಕ್ಕೆ ಬಿಟ್ಟುಕೊಟ್ಟಿದ್ದರು. ರಾಘವೇಂದ್ರ ತನ್ನ ಪಾಡಿಗೆ ಪೂಜೆ ಮಾಡಿಕೊಳ್ಳುತ್ತಿರುವನು. ಉಳಿದವರೆಲ್ಲ ಕೆಲದಿನಗಳಿಗೆ ಮುಂಚೆ 'ದೊಡ್ಡವರ' ರಾಮನವಮಿಯಲ್ಲಿ ಹಾಡುತ್ತಿದ್ದ ಭಜನೆಗಳು, ಹಾಡುಗಳು ಎಲ್ಲವನ್ನೂ ತಾವು ಕಲಿತಮಟ್ಟಿಗೆ ಹಾಡತೊಡಗುವರು. ಇದಾದ ಮೇಲೆ ರಾಮ, ಲಕ್ಷ್ಮಣ, ಸೀತೆ ಮತ್ತಿತರ ರಾಮಾಯಣದ ಪಾತ್ರಗಳ ವೇಷಭೂಷಣಗಳನ್ನು ಧರಿಸಿಕೊಂಡು ಕಾಲೊನಿಯ ಬೀದಿಗಳಲ್ಲೆಲ್ಲ ಸುತ್ತಾಡುವರು. ಇವರ ವಿವಿಧ ವೇಷಧಾರಣೆಗೆ ದೊಡ್ಡವರ ಮಾರ್ಗದರ್ಶನವೂ ಇರುತ್ತಿತ್ತು. ಹೀಗೆ, ಬಾಲರಾಮನವಮಿ ಮಕ್ಕಳ ಪಾಲಿಗೆ ಅವಿಸ್ಮರಣೀಯ ಕಾರ್ಯಕ್ರಮವಾಗಿರುತ್ತಿತ್ತು. ರಾಮನವಮಿಯಂತೆಯೇ ಎಂಟಿಎಸ್ ಕಾಲೊನಿಯ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಜನವರಿ ೨೬ರ ಗಣರಾಜ್ಯ ದಿನ, ಆಗಸ್ಟ್ ೧೫ರ ಸ್ವಾತಂತ್ರ್ಯ ದಿನಾಚರಣೆಗಳೂ ಸೇರ್ಪಡೆಯಾದವು. ಅಂದು ಧ್ವಜಾರೋಹಣಕ್ಕೆ ಹೊರಗಿನ ಗಣ್ಯರನ್ನು ಕರೆಸುವ ಬದಲು ಕಾಲೊನಿಯ ಹಿರಿಯರೊಬ್ಬರಿಂದ ಧ್ವಜಾರೋಹಣ ಮಾಡಿಸುವ ಪರಿಪಾಟ ಬೆಳೆದು ಬಂದಿತು. ನಾಡಿನ ಪ್ರಮುಖ ರಾಜಕಾರಣಿಗಳಲ್ಲೊಬ್ಬರಾಗಿದ್ದ ಸರೋಜಿನಿ ಮಹಿಷಿಯವರು ಕೆಲವೊಮ್ಮೆ ಸಮಾರಂಭಕ್ಕೆ ಆಗಮಿಸಿ ದಿನದ ಮಹತ್ವದ ಬಗೆಗೆ ಭಾಷಣ ಮಾಡಿದ್ದೂ ಇತ್ತು. ಕಾಲೊನಿಯ ಯಾವುದೇ ಸಮಾರಂಭದ ಆಹ್ವಾನ ಪತ್ರಿಕೆಯನ್ನಾದರೂ ಮಹಿಷಿಯವರಿಗೆ ಕಳುಹಿಸುವುದು ರೂಢಿಯಾಗಿತ್ತು.

ಹೀಗೊಮ್ಮೆ ಕಾಲೊನಿಯಲ್ಲಿ ರಾಷ್ಟ್ರೀಯ ದಿನಾಚರಣೆಯೊಂದು ಏರ್ಪಟ್ಟಿತ್ತು. ಅಂದು ಅನಿರೀಕ್ಷಿತವಾಗಿ ಅಲ್ಲಿಗೆ ಸರೋಜಿನಿ ಮಹಿಷಿಯವರು ಆಗಮಿಸಿದರು. ಕಾಲೊನಿಯವರಿಗೆಲ್ಲ ಸಡಗರ. ಏಕೆಂದರೆ, ಆಗ ಮಹಿಷಿಯವರು ಕೇಂದ್ರ ಸರ್ಕಾರದಲ್ಲಿ ಸಚಿವೆಯಾಗಿದ್ದರು. ವಿಷಯ ತಿಳಿದ ರೈಲ್ವೇ ಹಿರಿಯ ಅಧಿಕಾರಿಗಳೂ ಸ್ಥಳಕ್ಕೆ ಧಾವಿಸಿ ಬಂದರು. ಕಾರ್ಯಕಾರಿ ಸಮಿತಿಯವರನ್ನು ಕರೆದು ತಮಗೆ ಮುಂಚಿತವಾಗಿ ತಿಳಿಸದೆ ಕೇಂದ್ರಸಚಿವರನ್ನು ಕರೆಸಿದ್ದು ಸರಿಯೇ ಎಂದು ತರಾಟೆಗೆ ತೆಗೆದುಕೊಂಡರು. ಆದರೆ, ತಾವು ಮಾಮೂಲಿನಂತೆ ಮಹಿಷಿಯವರಿಗೆ ಆಹ್ವಾನ ಪತ್ರಿಕೆ ಕಳುಹಿಸಿದ್ದಾಗಿಯೂ, ಕಾಲೊನಿಯ ಚಟುವಟಿಕೆಗಳ ಬಗೆಗಿನ ಅಭಿಮಾನದಿಂದ ಸಚಿವೆ ಬಂದಿರುವರೆಂದು ಸಮಜಾಯಿಷಿ ಕೊಟ್ಟದ್ದಾಯಿತು.

ಕೇಂದ್ರ ಸಚಿವರು ಬರುವ ನಿರೀಕ್ಷೆಯೇನೂ ಇರಲಿಲ್ಲವಾದ್ದರಿಂದ ಅವರ ಸ್ವಾಗತಕ್ಕೆ ಕಾಲೊನಿಯ ಸಮಿತಿಯವರು ಪ್ರತ್ಯೇಕವಾಗಿ ಯಾವುದೇ ಸಿದ್ಧತೆಯನ್ನೂ ಮಾಡಿಕೊಂಡಿರಲಿಲ್ಲ. ಕಾಲೊನಿಯು ಊರಿನ ಮಾರುಕಟ್ಟೆ ದೂರವಿದ್ದುದರಿಂದ ಗಣ್ಯರಿಗೆ ಹಾರ ಹಾಕುವುದಕ್ಕೂ ತತ್ವಾರ. ಏನು ಮಾಡುವುದೆಂದು ಯೋಚಿಸುವಷ್ಟರಲ್ಲಿ ಅಲ್ಲಿನ ಗುಡಿಯ ಅರ್ಚಕರು ನೆರವಿಗೆ ಬಂದರು. ದೇವರಿಗೆ ತೊಡಿಸಿದ್ದ ಹಾರವನ್ನೇ ತೆಗೆದು ಸಚಿವೆಯವರಿಗೆ ಹಾಕಿ ಶುಭಕೋರಿದ್ದಾಯಿತು. ತಮಗೊದಗಿದ ಭಾಗ್ಯಕ್ಕೆ ಸಚಿವರೂ ಸಂತೋಷಪಟ್ಟುಕೊಂಡರು.

# ಸರಳ ಯೋಗಾಭ್ಯಾಸ

**ಎಸ್. ರಾಘವೇಂದ್ರ ಪ್ರಸಾದ್**
**ಅಧ್ಯಕ್ಷರು - ಸಹಬಾಳ್ವೆ**

## ಮಂಡೂಕಾಸನ (The Frog Pose)

**ಮಂಡೂಕ ಎಂದರೆ ಕಪ್ಪೆಯನ್ನು ಹೋಲುವ ಭಂಗಿಯ ಈ ಆಸನವನ್ನು ಮಂಡೂಕಾಸನ ಎಂದು ಕರೆಯುತ್ತಾರೆ.**



**ಆಸನ ಮಾಡುವ ಕ್ರಮ:** 1) ವಜ್ರಾಸನದಲ್ಲಿ ನೇರವಾಗಿ ಕುಳಿತುಕೊಳ್ಳಿ. 2) ಹೆಬ್ಬೆರಳುಗಳನ್ನು ಒಳಗೆ ಮಡಿಸಿ ಉಳಿದ ನಾಲ್ಕು ಬೆರಳುಗಳನ್ನು ಅದರ ಮೇಲೆ ಮಡಿಸಿ ಮುಷ್ಟಿಯನ್ನು ಮಾಡಿ. 3) ಮುಷ್ಟಿಗಳನ್ನು ಹೊಟ್ಟೆಯ ಮೇಲೆ ಹೊಕ್ಕಳ ಎರಡೂ ಬದಿಗಳಲ್ಲಿ ಇಟ್ಟುಕೊಳ್ಳಿ. 4) ಉಸಿರನ್ನು ಬಿಡುತ್ತಾ ಹೊಟ್ಟೆಯನ್ನು ಒಳಗೆ ಎಳೆದುಕೊಳ್ಳಿ. ನಿಧಾನ ಮುಂದಕ್ಕೆ ಬಾಗಿ ಎರಡೂ ಮುಷ್ಟಿಗಳಿಂದ ಹೊಕ್ಕುಳನ್ನು ಆದಷ್ಟು ಒತ್ತಿಹಿಡಿಯಿರಿ. ಉಸಿರು ಬಿಗಿಹಿಡಿದ ಈ ಸ್ಥಿತಿಯಲ್ಲಿ ಇರಿ ಸಾಧ್ಯವಾದಷ್ಟು ಕಾಲ ಇರಿ. ಬೆನ್ನು ನೇರವಾಗಿರಲಿ. 5) ಉಸಿರನ್ನು ಎಳೆದುಕೊಳ್ಳುತ್ತ ನಿಧಾನವಾಗಿ ಸೊಂಟದ ಭಾಗದಿಂದ ಸಂಪೂರ್ಣ ಮೇಲೆ ಬಂದು ವಜ್ರಾಸನದಲ್ಲಿ ಕುಳಿತು ನಿಧಾನವಾಗಿ ಉಸಿರಾಡುತ್ತ ವಿಶ್ರಾಂತಿ ಮಾಡಿ. ಈ ಆಸನವನ್ನು ಸುಮಾರು 5-7 ಬಾರಿ ಪುನರಾವರ್ತಿಸಿ.

**ಆಸನದ ಪ್ರಯೋಜನಗಳು:** ಮಂಡೂಕಾಸನವು ಮೇದೋಜೀರಕ ಗ್ರಂಥಿಗೆ ಉತ್ತಮವಾದದ್ದು. ಮಧುಮೇಹ, ಮಲಬದ್ಧತೆ, ಅಜೀರ್ಣ ಮುಂತಾದ ತೊಂದರೆಗಳ ಚಿಕಿತ್ಸೆಗೆ, ಹೊಟ್ಟೆ, ಸೊಂಟ ಮತ್ತು ತೊಡೆಗಳಲ್ಲಿ ಹೆಚ್ಚುವರಿ ಕೊಬ್ಬನ್ನು ಕಡಿಮೆ ಮಾಡಲು, ಬೆನ್ನಿನ ಸ್ನಾಯುಗಳ ಹಿಗ್ಗುವಿಕೆಗೆ ಹಾಗೂ ಮೊಣಕಾಲು, ಕಾಲು ಮತ್ತು ಕಣಕಾಲುಗಳ ಶಕ್ತಿಯನ್ನು ವೃದ್ಧಿಸಲು ಸಹಾಯಕ.

**ಎಚ್ಚರಿಕೆ ವಹಿಸಬೇಕಾದವರು:** ಗರ್ಭಿಣಿ ಸ್ತ್ರೀಯರು, ರಕ್ತದ ಏರೊತ್ತಡ, ಬೆನ್ನು ನೋವು, ಮೊಣಕಾಲು, ಸೊಂಟದ ಬೇನೆಯಿಂದ ಬಳಲುವವರು, ಗಾಯಗೊಂಡವರು, ಇತ್ತೀಚೆಗೆ ಶಸ್ತ್ರಚಿಕಿತ್ಸೆಗೊಳಗಾದವರು ಮಂಡೂಕಾಸನ ಮಾಡಬಾರದು.

# “ಸಂಘಟನೆಗೆ ಪರ್ಯಾಯ ಪದವೆಂದರೆ ಅನಂತಕುಮಾರ್”

- ಶ್ರೀ ಮಹೇಶ್ ಜೋಷಿ
ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು

ಅನಂತಪಥ ಮಾಸಪತ್ರಿಕೆಯ ೩೬ನೆಯ ಸಂಚಿಕೆಯನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಅನಂತಕುಮಾರರ ನೆನಪುಗಳು ಕಾಡುತ್ತವೆ. ಸಂಘಟನೆ, ನೇತೃತ್ವ, ನಿರಂತರತೆ, ಕ್ರಿಯಾಶೀಲತೆ, ಶಿಸ್ತು, ಸಂಯಮ, ದಿಟ್ಟತನದ ಜೊತೆಗೆ ವಿನಯ, ಎಲ್ಲಕ್ಕಿಂತ ಹೆಚ್ಚಾಗಿ  ಚಾಣಾಕ್ಷತನ - ಈ ಎಲ್ಲ ಗುಣಗಳನ್ನು ಹೊಂದಿರುವ ಒಬ್ಬ ವ್ಯಕ್ತಿಯನ್ನು ತೋರಿಸಿ ಎಂದರೆ ಅನಂತಕುಮಾರ್ ಹೆಸರು ಹೇಳಬಹುದು.

ಅನಂತಕುಮಾರ್ ಮತ್ತು ನಾನು ಒಂದೇ ಜಿಲ್ಲೆಯವರು, ಇಬ್ಬರೂ ಹುಬ್ಬಳ್ಳಿಯಲ್ಲಿದ್ದವರು, ಒಂದೇ ಕಾಲೇಜಿನಲ್ಲಿ ಓದಿದವರು. ಅನಂತಕುಮಾರ್ ನನಗಿಂತ ಸುಮಾರು ಎರಡು ವರ್ಷ ಸಣ್ಣವರು. ನಾನೂ ಕೂಡ ವಿದ್ಯಾರ್ಥಿ ಪರಿಷತ್ತಿನ ಸದಸ್ಯನಾಗಿದ್ದೆ. ತುರ್ತುಪರಿಸ್ಥಿತಿಯ ಸಮಯದಲ್ಲಿ ನಾನು ಬೆಂಗಳೂರಿನಲ್ಲಿದ್ದೆ. ಅನಂತಕುಮಾರ್ ಜೊತೆ ನನ್ನ ಮೊದಲ ಭೇಟಿ ನಡೆದದ್ದು ಆಗಲೇ. ಪರಿಚಯವಾದ ಹೊಸದರಲ್ಲಿಯೇ 'ಇವರು ನಮ್ಮವರು' ಎಂಬ ಭಾವನೆ ಬೆಳೆದು ಆತ್ಮೀಯತೆ ಮೂಡಿತ್ತು.

ಅಂದಿನಿಂದ ಕೊನೆಯ ವರೆಗೂ ನಮ್ಮ ನಡುವೆ ನಿರಂತರವಾದ ಸಂಪರ್ಕವಿತ್ತು. ಪ್ರೊ. ಪಿ ವಿ ಕೃಷ್ಣ ಭಟ್ಟರನ್ನೂ ನಾನು ಅದೇ ಸಂದರ್ಭದಲ್ಲಿ ಭೇಟಿಯಾಗಿದ್ದೆ. ನಮ್ಮ ಭೇಟಿಯ ಸಮಯದಲ್ಲಿ ರಾಜೇಂದ್ರ, ಗೋಖಲೆ, ಪ್ರಹ್ಲಾದ್‌ಜೋಶಿ ಮತ್ತು ದತ್ತಾತ್ರೇಯ ಹೊಸಬಾಳೆ ಜೊತೆಯಲ್ಲಿದ್ದರು. ನಂತರ ಅನಂತಕುಮಾರರೂ ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಾಲೇಜಿನಲ್ಲಿ ಓದು ಮುಗಿಸಿ ಬೆಂಗಳೂರಿಗೆ ಬಂದರು.

ಅನಂತಕುಮಾರರು ವಿದ್ಯಾರ್ಥಿ ಪರಿಷತ್ತಿನ ರಾಜ್ಯ ಕಾರ್ಯದರ್ಶಿಯಾದಾಗಲೂ ಅವರ ಜೊತೆ ನನಗೆ ಒಡನಾಟವಿತ್ತು. ಅನಂತಕುಮಾರರ ಮಾತುಗಳಿಂದ ಪ್ರಭಾವಿತನಾಗಿ ನಾನು ಜಗನ್ನಾಥರಾವ್ ಜೋಷಿಯವರ ಸಂಪರ್ಕವನ್ನೂ ಬೆಳೆಸಿದ್ದೆ. ಜಗನ್ನಾಥರಾಯರ ಹತ್ತಿರ ವಿಷ್ಣುಸಹಸ್ರನಾಮ ಕಲಿಯಲೂ ನನಗೆ ಅನಂತಕುಮಾರರದೇ ಪ್ರೇರಣೆ.

ಅನಂತಕುಮಾರ್ ಕೇಂದ್ರಮಂತ್ರಿಯಾಗಿದ್ದಾಗ ನಾನು ದೂರದರ್ಶನದಲ್ಲಿ ನಿರ್ದೇಶಕನಾಗಿ ೨೦೧೩ರಿಂದ ದೆಹಲಿಯಲ್ಲಿದ್ದೆ. ರಾಷ್ಟ್ರಪತಿಗಳ ಕಾರ್ಯಕ್ರಮಗಳ ನೇರ ಪ್ರಸಾರದ ಉಸ್ತುವಾರಿ ನನ್ನದಾಗಿತ್ತು. ೨೦೧೪ರಲ್ಲಿ ಪ್ರಧಾನಮಂತ್ರಿಗಳ ಪ್ರಮಾಣ ವಚನವನ್ನು ನಾನೇ ನೇರ ಪ್ರಸಾರ ಮಾಡಿದ್ದೆ. ಪ್ರಧಾನಮಂತ್ರಿಗಳ ಕಚೇರಿಗೂ ಹೋಗಬೇಕಾಗಿ ಬಂದಾಗ ಅಲ್ಲಿಯೂ ಅನಂತಕುಮಾರ್ ಸಿಗುತ್ತಿದ್ದರು. ಕೆಲವೊಮ್ಮೆ ಸಲ ತುರ್ತಾಗಿ ಮಾತಾಡೋದಿದೆ ಎಂದು ನನ್ನನ್ನು ತಮ್ಮ ಕಾರಿನಲ್ಲಿಯೇ ವಿಮಾನ ನಿಲ್ದಾಣದವರೆಗೆ ಕರೆದೊಯ್ಯುತ್ತಿದ್ದರು. ಸಾರ್ವಜನಿಕವಾಗಿ ನಾವು ಶಿಷ್ಟಾಚಾರವನ್ನು ಪಾಲಿಸಿದರೂ ಖಾಸಗಿಯಾಗಿ ಭೇಟಿಯಾದಾಗ  ಹೆಸರು ಹಿಡಿದೇ ಮಾತನಾಡಿಸುತ್ತಿದ್ದರು.

ಪ್ರತಿ ಡಿಸೆಂಬರ್ ೩೧ಕ್ಕೆ ನ್ಯಾಷನಲ್ ಕಾಲೇಜಿನಲ್ಲಿ ಅವರು ಅದಮ್ಯ ಚೇತನ ಉತ್ಸವ ಕಾರ್ಯಕ್ರಮ ಮಾಡುತ್ತಿದ್ದರು. ಅವರ ವಿನಂತಿಯ ಮೇರೆಗೆ ಈ ಕಾರ್ಯಕ್ರಮವನ್ನು ದೂರದರ್ಶನದ ಚಂದನ ವಾಹಿನಿಯಲ್ಲಿ ನೇರ ಪ್ರಸಾರ ಮಾಡಲು ವ್ಯವಸ್ಥೆ ಮಾಡಿದ್ದೆ. ನಮ್ಮ ನೇರ ಪ್ರಸಾರದ ನಡುವೆ ಒಂದು ಮರಾಠಿ ಕಾರ್ಯಕ್ರಮವೂ ನುಸುಳಿತ್ತು. ಆ ಸಮಯದಲ್ಲಿ ಕನ್ನಡ-ಮರಾಠಿ ವಿವಾದವಿದ್ದುದರಿಂದ ಅನೇಕರು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. ಆಗ ಅನಂತಕುಮಾರ್‌ನನ್ನ ಪಕ್ಷ ವಹಿಸಿ “ಇದರಲ್ಲಿ ಜೋಶಿಯವರ ತಪ್ಪೇನೂ ಇಲ್ಲ, ಕಾರ್ಯಕ್ರಮ ಆಯೋಜಿಸಿದವರು ನಾವು, ತಪ್ಪೇನಿದ್ದರೂ ಅದು ನನ್ನದು” ಎಂದು ಸಾರ್ವಜನಿಕವಾಗಿ ಹೇಳಿದ್ದರು.

ಅನಂತಕುಮಾರರ ಅನಾರೋಗ್ಯದ ಖಚಿತ ಮಾಹಿತಿ ಮಾಧ್ಯಮಗಳಿಗೆ ಇರಲಿಲ್ಲ. ಹೀಗಾಗಿ ಅನೇಕ ಸುಳ್ಳುಸುದ್ದಿಗಳು ಹಬ್ಬುತ್ತಿದ್ದವು. ನಮಗೆ ಅಸ್ಪಷ್ಟ ಮಾಹಿತಿ ಇದ್ದುದರಿಂದ ಅವರಿಗೆ ಏನೂ ಆಗದಿರಲಿ ಎಂದು ಪೂಜೆ, ಪ್ರಾರ್ಥನೆಗಳನ್ನು ನಡೆಸುತ್ತಿದ್ದೆವು. ದೇವಾಲಯದ ಪೂಜಾರಿಗಳು ಅನುಮಾನದಿಂದ ವಿಚಾರಿಸಿದರೆ “ಏನೂ ಇಲ್ಲ, ಅವರು ನಮ್ಮ ಸ್ನೇಹಿತರು, ಅಷ್ಟೇ” ಎಂದು ಹೇಳಿ ಜಾರಿಕೊಳ್ಳುತ್ತಿದ್ದೆವು.

ಅನಂತಕುಮಾರ್ ಅವರ ಹೆಸರು ಸಂಘಟನೆಗೆ ಪರ್ಯಾಯ ಪದ ಎಂದು ಹೇಳಬಹುದು.  ನಿರಂತರ ಕ್ರಿಯಾಶೀಲತೆ, ಶಿಸ್ತು, ದಿಟ್ಟತನ ಅವರ ಸಹಜ ಗುಣಗಳು. ಇಂದು ಅನಂತಕುಮಾರ್ ಇದ್ದಿದ್ದರೆ ಕರ್ನಾಟಕದ ಸ್ಥಿತಿ ಬೇರೆಯೇ ಆಗಿರುತ್ತಿತ್ತು ಎಂದು ಮಾತ್ರ ಹೇಳಬಲ್ಲೆ. ಎಲ್ಲ ಗುಣಗಳನ್ನು ಹೊಂದಿದ್ದೂ ಮಾನವೀಯತೆ ಇಲ್ಲದಿದ್ದರೆ ಅದು ಎಲ್ಲ ಬಣ್ಣವನ್ನೂ ಮಸಿ ನುಂಗಿತು ಎಂಬಂತಾಗುತ್ತದೆ. ಆದರೆ, ತಮ್ಮ ಮಾನವೀಯ ಗುಣ ಹಾಗೂ ಸಮಾಜಮುಖಿ ವ್ಯಕ್ತಿತ್ವಗಳಿಂದಾಗಿ ಅನಂತಕುಮಾರರು ನಮ್ಮ ನಡುವೆ ಭೌತಿಕವಾಗಿ ಇಲ್ಲದಿದ್ದರೂ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ.

ಅನಂತಕುಮಾರರ ಹೆಸರಿನಲ್ಲಿ ಸ್ಥಾಪಿತವಾಗಿರುವ ಪ್ರತಿಷ್ಠಾನವು ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇವುಗಳಲ್ಲಿ ನಾವೆಲ್ಲರೂ ನಮ್ಮನ್ನು ತೊಡಗಿಸಿಕೊಳ್ಳಬೇಕು. ಸಂಸ್ಕೃತಿಯು ಅನಂತಕುಮಾರರಿಗೆ ಪ್ರಿಯವಾದ ವಿಷಯ. ಅವರು ಸಂಸ್ಕೃತಿ ಇಲಾಖೆಯ ಮಂತ್ರಿಯಾಗಿದ್ದಾಗ ರಾಜಭವನದಲ್ಲಿ ನಡೆದ ಜಪಾನ್ ಉತ್ಸವಕ್ಕೆ ಬಂದು ಹುರಿದುಂಬಿಸಿದ್ದರು. ಅದುವರೆಗೆ ಮೈಕ್, ಕ್ಯಾಮೆರಾಗಳನ್ನು ನೋಡದೇ ಇರುವ, ವೇದಿಕೆ ಹತ್ತದೇ ಇರುವ ಕಲಾವಿದರನ್ನು ಗುರುತಿಸಿ, ಪ್ರೋತ್ಸಾಹಿಸಬೇಕು ಎಂಬ ಅವರ ಸಲಹೆಯಂತೆ ದೂರವಾಗಿದ್ದ ದೂರದರ್ಶನವನ್ನು 'ಸಮೀಪ ದರ್ಶನ' ಮಾಡಿದೆ. ಇದೇ ನಿಟ್ಟಿನಲ್ಲಿ ಎ-ಚಾಟ್ ಕಾರ್ಯಕ್ರಮವನ್ನು ಪ್ರತಿಷ್ಠಾನವು ನಡೆಸುತ್ತಿರುವುದು ಸಂತೋಷದ ವಿಷಯ. ಪ್ರತಿಷ್ಠಾನದ 'ಗ್ರಾಮ ಚೇತನ' ತಳಮಟ್ಟದ ರಾಜಕೀಯ ವ್ಯಕ್ತಿಗಳಿಗೆ ತರಬೇತಿ ನೀಡುವ ಇನ್ನೊಂದು ಪ್ರಶಂಸನೀಯ ಕಾರ್ಯಕ್ರಮ.

ಅನಂತಕುಮಾರರ ಕನ್ನಡಪ್ರೇಮ ಅಪ್ಪಟವಾದ್ದು. ಕನ್ನಡದ ಘನತೆ, ಗೌರವಗಳ ಬಗ್ಗೆ ಅವರಿಗಿದ್ದ ಹೆಮ್ಮೆ ಮತ್ತು ಅಭಿಮಾನಗಳು ಪ್ರಶ್ನಾತೀತ. ಕನ್ನಡದಲ್ಲೇ ಸಹಿಮಾಡುವಷ್ಟು ರಕ್ತವಾಗಿತ್ತು, ಅವರ ಕನ್ನಡಪ್ರೇಮ! ಕನ್ನಡ ಓದುವ ಹವ್ಯಾಸವನ್ನು ಹೆಚ್ಚಿಸಲು ಅವರು ಸಾವಿರಾರು ಪುಸ್ತಕಗಳನ್ನು ಕೊಡುಗೆಯಾಗಿ ನೀಡಿದ್ದರು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ.

ಅನಂತಕುಮಾರ್ ಇಂದು ನಮ್ಮ ನಡುವೆ ಇಲ್ಲ. ಆದರೆ, ಅವರು ತೋರಿಸಿದ ಮಾರ್ಗದಲ್ಲಿ ನಾವು ನಡೆಯಬೇಕು.  ಈ ನಿಟ್ಟಿನಲ್ಲಿ ಅನಂತಕುಮಾರರ ಹೆಸರಿನಲ್ಲಿ ಪ್ರಕಟವಾಗುತ್ತಿರುವ 'ಅನಂತಪಥ' ಮಾಸಪತ್ರಿಕೆಯು ಎಲ್ಲರಿಗೂ ಮಾರ್ಗದರ್ಶಕವಾಗಲಿ.

**ಅನಂತಪಥ ಮಾಸಪತ್ರಿಕೆಯ 36ನೇ ಸಂಚಿಕೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಮಹೇಶ ಜೋಷಿಯವರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಶ್ರೀ ಜೋಷಿಯವರು ತಮ್ಮ ಮತ್ತು ಅನಂತಕುಮಾರರ ಆತ್ಮೀಯತೆಯನ್ನು ಸ್ಮರಿಸಿಕೊಂಡು ಭಾವುಕರಾದರು. ಜನನಾಯಕನಾಗಿ ಎತ್ತರಕ್ಕೆ ಬೆಳೆದ ಅನಂತಕುಮಾರರ ಜೀವನ, ವ್ಯಕ್ತಿತ್ವಗಳು ಸರ್ವದಾ ಅನುಕರಣೀಯವೆಂದು ಬಣ್ಣಿಸಿದ ಶ್ರೀ ಮಹೇಶ ಜೋಷಿಯವರ ಭಾಷಣ, ಸಂದರ್ಶನದ ಆಯ್ದ ಭಾಗಗಳನ್ನು ಇಲ್ಲಿ ಸಂಗ್ರಹವಾಗಿ ಪ್ರಕಟಿಸಲಾಗಿದೆ.**



ಪುಟ 1 ರಿಂದ

# ಗ್ರಾಮೀಣ ಮಹಿಳೆಯರಿಗೆ ನೇತೃತ್ವ ವಿಕಸನ ಶಿಬಿರ







ಇನ್ನೊಬ್ಬ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಪ್ರಕಾಶ್ ಭಟ್ ಅವರು, ನಾಯಕತ್ವದ ಲಕ್ಷಣಗಳು ಮತ್ತು ಗ್ರಾಮೀಣ ಅಭಿವೃದ್ಧಿಯ ಕಲ್ಪನೆಯ ಬಗ್ಗೆ ತಿಳಿಸಿ ಕೊಟ್ಟರು. ನಾಯಕನಾದವನು ನುಡಿದಂತೆ ನಡೆಯುವವನಾದರೆ ಮಾತ್ರ ಅದನ್ನು ಅವನಿಗೆ ಹೇಳಲು ಅಧಿಕಾರವಿರುತ್ತದೆ, ಆದುದರಿಂದ ನಾಯಕತ್ವ ವಹಿಸಿಕೊಂಡವರು ತಮ್ಮ ಕಾರ್ಯಗಳ ಮೂಲಕ ಇತರರಿಗೆ ಮಾದರಿಯಾಗಿರಬೇಕು ಎಂದು ಹೇಳಿದರು. ಶ್ರೀ ಪ್ರಭಾಕರ್ ದೇಶಪಾಂಡೆಯವರು ಮಾತನಾಡಿ, ನಮ್ಮ ಗ್ರಾಮವನ್ನು ರಾಮರಾಜ್ಯ ಮಾಡಬೇಕಾದರೆ ಮೊದಲು ನಾವು ನಮ್ಮಲ್ಲಿರುವ ರಾವಣನನ್ನು ಓಡಿಸಬೇಕು ಮತ್ತು ನಾಯಕನಾದವನು ಪ್ರಾಮಾಣಿಕತೆ ಮತ್ತು ಪಾರದರ್ಶಕವಾಗಿ ಕೆಲಸ ಮಾಡಿದಲ್ಲಿ ಗ್ರಾಮದಲ್ಲಿ ವಿಕಾಸ ಕಾಣಬಹುದು ಎಂದು ಹೇಳಿದರು. ಗ್ರಾಮಪಂಚಾಯಿತಿಗಳು ಸಹಕಾರ ತತ್ತ್ವದ ನೆಲೆಯಲ್ಲಿ ಕೆಲಸ ಮಾಡಿದರೆ ಸಂಪನ್ಮೂಲಗಳ ಸದ್ಬಳಕೆಯಾಗುತ್ತದೆ ಎಂದೂ ಅವರು ಹೇಳಿದರು.

ದಿನಾಂಕ 17 ರಂದು ಯೋಗ ಶಿಕ್ಷಕರಾದ ಶ್ರೀ ವಿನಾಯಕ್ ತಲಗೇರಿಯವರು ಶಿಬಿರಾರ್ಥಿಗಳಿಗೆ, ವಿವಿಧ ಪ್ರಾಣಾಯಾಮಗಳು ಮತ್ತು ಸರಳ ಯೋಗಾಸನಗಳ ಬಗ್ಗೆ ಪ್ರಾಯೋಗಿಕ ಮಾಹಿತಿ ತಿಳಿಸಿಕೊಟ್ಟರು. ಸರ್ವರೋಗಗಳಿಗೆ ಯೋಗಾಭ್ಯಾಸದ ಮೂಲಕ ಚಿಕಿತ್ಸೆ ನೀಡಬಹುದು, ಯೋಗವನ್ನು ನಮ್ಮ ಜೀವನದಲ್ಲಿ ಅಳವಡಿಕೊಂಡಲ್ಲಿ ಆರೋಗ್ಯಯುತ ಜೀವನ ನಮ್ಮದಾಗುತ್ತದೆ ಎಂದು ಹೇಳಿದರು.

ಶ್ರೀ ಟಿ. ಎಸ್ ಗೋಪಾಲ್ ಅವರು ಶಿಬಿರಾರ್ಥಿಗಳಿಗೆ ಹುಬ್ಬಳ್ಳಿ- ಧಾರವಾಡ ಜಿಲ್ಲೆಯ ಹಲವು ದೇವಾಲಯಗಳ ಪರಿಚಯ ಮಾಡಿಕೊಟ್ಟರು. ದೇವಾಲಯಗಳ ಸಂರಕ್ಷಣೆಯು ನಮ್ಮೆಲ್ಲರ ಹೊಣೆಯಾಗಿದೆ. ಗ್ರಾಮಗಳ ಇತಿಹಾಸವನ್ನು ಸಾರುವ ವೀರಗಲ್ಲು ಮುಂತಾದ ಶಿಲ್ಪಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಅವುಗಳನ್ನು ಪರಿಚಯಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ತಿಳಿಸಿದರು. ಶ್ರೀ ರಾಜೇಂದ್ರ ಹೆಗಡೆಯವರು ಹಸಿರು ಜೀವನ ಶೈಲಿಯ ಬಗ್ಗೆ ಮಾತನಾಡಿ, ಪ್ಲಾಸ್ಟಿಕ್‌ನಿಂದಾಗುವ ಪರಿಸರ ಮಾಲಿನ್ಯದ ಬಗ್ಗೆ ಹಾಗೂ ಕೀಟನಾಶಕಗಳ ಬಳಕೆಯ ದುಷ್ಪರಿಣಾಮಗಳ ಬಗ್ಗೆ ವಿವರವಾಗಿ ಹೇಳಿದರು. ಕಣ್ಣೂರು ಶಾಂತಿಕುಟೀರದ ಶ್ರೀ ಕೃಷ್ಣ ಸಂಪಗಾಂವಕರ್ ಮತ್ತು ತಂಡದವರು ಸ್ವರಾಜ್ಯ-ಸುರಾಜ್ಯ-ರಾಮರಾಜ್ಯದ ಬಗ್ಗೆ ಸಂದೇಶವನ್ನು ಸಾರುವ ಗೀತನಾಟಕವನ್ನು ಪ್ರಸ್ತುತಪಡಿಸಿದರು. ಶ್ರೀ ಜಗದೀಶ್ ಬಾಪಟ್ ಅವರು ಶಿಬಿರಾರ್ಥಿಗಳಿಗೆ ಪರಿಣಾಮಕಾರಿಯಾದ ಸಂವಹನ ಕೌಶಲ್ಯದ ಬಗ್ಗೆ ತಿಳಿಸಿಕೊಟ್ಟರು. ವೇದಿಕೆಯಿಂದ ಮಾತನಾಡುವಾಗ ಅನುಸರಿಸಬೇಕಾದ ಕ್ರಮ ಹಾಗೂ ಗಮನಿಸಬೇಕಾದ ಅಂಶಗಳ ಕುರಿತು ಪ್ರಾಯೋಗಿಕವಾಗಿ ಆಟಗಳ ಮೂಲಕ ತಿಳಿಸಿಕೊಟ್ಟರು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಶ್ರೀಮತಿ ಅನಘಾ ಲಿಮಯೆ "ನಮ್ಮ ಊರಿಗೆ ನಮ್ಮ ಕೊಡುಗೆ" ಎಂಬ ವಿಷಯದ ಬಗ್ಗೆ ಶಿಬಿರಾರ್ಥಿಗಳ ಜೊತೆ ಗುಂಪು ಚರ್ಚೆ ನಡೆಸಿದರು. 18 ರಂದು ನಡೆದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರವನ್ನು ವಿತರಿಸಲಾಯಿತು. ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡು ಶಿಬಿರದ ಬಗ್ಗೆ ಸಂತಸ ವ್ಯಕ್ತ ಪಡಿಸಿದರು. ಶ್ರೀ ಪೂರ್ಣಪ್ರಜ್ಞ ಅವರು ವಂದಿಸಿದರು. ಶ್ರೀ ಜಗದೀಶ್ ಬಾಪಟ್, ಶ್ರೀ ಲಕ್ಷ್ಮಣರಾವ್ ಓಕ್, ಶ್ರೀ ಜಿ. ಎಂ. ಇನಾಂದಾರ್, ಶ್ರೀ ಅಚ್ಯುತ್ ಲಿಮಯೆ, ಶ್ರೀಮತಿ ಅನಘಾ ಲಿಮಯೆ ಮೊದಲಾದ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು. **ವರದಿ: ಶ್ರೀ ತ್ರಿವಿಕ್ರಮ ಜೋಶಿ**

## ಶಿಬಿರಾರ್ಥಿಗಳ ಅಭಿಪ್ರಾಯ

ಗ್ರಾಮ ಚೇತನ ಶಿಬಿರದಿಂದ ನಾವು ಏನು ಕಲಿತೆವು ಅನ್ನೋದಕ್ಕಿಂತ ನಾವು ಎಷ್ಟೆಲ್ಲ ತಿಳಿದುಕೊಂಡಿಲ್ಲ ಎಂಬುದು ಅರಿವಾಯ್ತು. ಗ್ರಾಮೀಣ ಅಭಿವೃದ್ಧಿಗಾಗಿ ನಾವು ಏಕತಾ ಭಾವನೆಯಿಂದ ಕೆಲಸ ಮಾಡುವ ಅಗತ್ಯವಿದೆ ಅನ್ನಿಸ್ತು. ಪ್ಲಾಸ್ಟಿಕ್‌ನ್ನು ಯಾಕೆ ವಿರೋಧಿಸಬೇಕು ಅಂತ ಮಾಹಿತಿ ಸಿಕ್ತು. ಸಸಿ ನೆಡುವ ಮಹತ್ವವನ್ನು ಸಮಾಜಕ್ಕೆ ತಿಳಿಸಬೇಕು ಅಂತ ಮನವರಿಕೆ ಆಯ್ತು. ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ಸಹಾಯ ಮಾಡ್ತಾ ಹೋದ್ರ ಎಷ್ಟು ಚಲೋ ಅಂತ ಅನ್ನಿಸ್ತು. ಬಯಲುಶೌಚ ವಿರುದ್ಧ ಅರಿವು ಹೆಚ್ಚಬೇಕು ಹೀಂಗ ಮಾಹಿತಿ ತಗೊಂಡೆವು. ಮೊದಮೊದಲು ಶಿಬಿರಕ್ಕೆ ಏಕೆ ಹೋಗಬೇಕು ಅಂದುಕೊಂಡ್ವಿ. ಆದ್ರ ಇಲ್ಲಿ ಬಂದ ನೋಡಿದ್ರ, ಎಷ್ಟೊ ವಿಷಯಗಳು ತಿಳಿದ್ವು. ಅನಂತಕುಮಾರ್ ಪ್ರತಿಷ್ಠಾನದವರು ಯಾವುದಕ್ಕೇ ಕರೀಲಿ, ನಾವು ತಯಾರಿದ್ದೀವಿ ಎಂದು ವಚನ ಕೊಡ್ತೀವಿ. **-ರತ್ನ ಹಟ್ಟಿ, ಛಬ್ಬಿ**

ಗ್ರಾಮ ಚೇತನ ತರಬೇತಿ ಶಿಬಿರವು ನಮ್ಮಲ್ಲಿಯ ನಾಯಕತ್ವದ ಶಕ್ತಿಯನ್ನು ಎಚ್ಚರಗೊಳಿಸಿತು. ನಾವೇ ಮೇಲು ಎಂಬ 'ಅಹಂ' ಮರೆಸಿತು. ನಮ್ಮಿಂದಲೇ ನಮ್ಮ ಗ್ರಾಮದ ಅಭಿವೃದ್ಧಿ ಸಾಧ್ಯ ಅಂತ ಮನವರಿಕೆ ಆಯ್ತು. ಗಿಡ ನೆಡುವ ಮಹತ್ವ ಮನಗಂಡೆವು. ಇತಿಹಾಸದ ಸ್ಮಾರಕಗಳು, ವೀರಗಲ್ಲು, ಮಾಸ್ತಿಕಲ್ಲು ಬಗ್ಗೆಯೂ ಜಾಗೃತಿ ಮೂಡಿತು. 'ಅನ್ನವೇ ದೇವರು' ಎಂದು ತಿಳಿದಿದ್ದರೂ ಈ ಶಿಬಿರದಿಂದ ಮತ್ತಷ್ಟು ಮನದಟ್ಟಾಯಿತು. ನಮ್ಮೊಳಗೆ ನಾವು ಜಾಗೃತರಾಗುವಂತೆ ಮಾಡಿತು. **-ದೇವಕ್ಕ ಬಡಿಗೇರ್**

ಪುಟ 1 ರಿಂದ

## ಪ್ರೇರಣಾಶೀಲ ನಾಯಕತ್ವದ ಹಲವು ಮುಖಗಳು

**ಸಮಸ್ಯೆ ನಿವಾರಣೆ, ಸಂಘಟನೆಯ ಬಲವರ್ಧನೆ:** ಸಮಸ್ಯೆಯನ್ನು ನೇರಾನೇರ ಎದುರಿಸುವುದು ನಾಯಕತ್ವದ ಗುಣ. 1989-90ರಲ್ಲಿ, ಕರ್ನಾಟಕದಲ್ಲಿ ಭಾರತೀಯ ಜನತಾಪಕ್ಷ ಆಗಿನ್ನೂ ನೆಲೆ ಹುಡುಕತೊಡಗಿದ್ದ ಕಾಲ. ನಾಲ್ವರು ಶಾಸಕರನ್ನು ಹೊರತುಪಡಿಸಿದಂತೆ ಬಿಜೆಪಿಗೆ ಹೇಳಿಕೊಳ್ಳುವ ಸ್ಥಾನಮಾನಗಳೇನೂ ಇರಲಿಲ್ಲ. ಪಕ್ಷದ ಸಂಸದರಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವವರು ಯಾರೂ ಇರಲಿಲ್ಲ. ಪಕ್ಷದ ರಾಜಾಧ್ಯಕ್ಷರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಅನಂತಕುಮಾರರಿಗೂ ಪಕ್ಷದ ಬಲವರ್ಧನೆ, ಸಂಘಟನೆ ನಿಜವಾದ ಸವಾಲೇ ಆಗಿದ್ದಿತು.

ಗುಜರಾತದ ಸೋಮನಾಥದಿಂದ ಅಯೋಧ್ಯೆಯೆಡೆಗೆ ನಡೆದ ಶ್ರೀ ಎಲ್.ಕೆ. ಅಡ್ವಾಣಿಯವರ ರಥಯಾತ್ರೆ ಸಂದರ್ಭ. ದಕ್ಷಿಣಕ್ಕೆ ಹೊರಳಿದ ರಥವು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಕೆಲವು ಭಾಗಗಳ ಮೂಲಕ ಸಾಗುತ್ತಿತ್ತು. ಈ ಯಾತ್ರೆ ಕರ್ನಾಟಕದತ್ತ ಸುಳಿಯಬೇಡವೆ? ಎಂಬುದು ಅನಂತಕುಮಾರರ ಪ್ರಶ್ನೆ. ಕೂಡಲೇ ಪಕ್ಷದ ಧುರೀಣ ಶ್ರೀ ಪ್ರಮೋದ್ ಮಹಾಜನರನ್ನು ಅನಂತಕುಮಾರ್ ಸಂಪರ್ಕಿಸಿದರು. ಮಹಾರಾಷ್ಟ್ರದಿಂದ ಆಂಧ್ರದತ್ತ ಹೊರಳುವ ಮುನ್ನ ಕರ್ನಾಟಕದ ನೆಲದೊಳಕ್ಕೆ ಪ್ರವೇಶಮಾಡಿಯೇ ರಥಯಾತ್ರೆ ಮುಂದುವರಿಯಬೇಕೆಂದು ಆಗ್ರಹಿಸಿದರು. ಅನಂತಕುಮಾರರ ಆಗ್ರಹಕ್ಕೆ ಮಣಿದ ರಥಯಾತ್ರೆಯು ಒಂದು ದಿನದ ಮಟ್ಟಿಗೆ ಕರ್ನಾಟಕದ ನೆಲದ ಮೂಲಕ ಹಾದುಹೋಯಿತು. ಕರ್ನಾಟಕದಲ್ಲಿ ಅಂದಿನ ರಥಯಾತ್ರೆ ಸಾಂಕೇತಿಕವಾಗಿದ್ದರೂ ಸಾರ್ವಜನಿಕವಾಗಿ ಅದು ದೊಡ್ಡ ಸಂಚಲನವನ್ನೇ ಉಂಟುಮಾಡಿತು. ರಥಯಾತ್ರೆಯನ್ನು ಕರ್ನಾಟಕಕ್ಕೆ ಬರಮಾಡಿಕೊಳ್ಳುವ ಅನಂತಕುಮಾರರ ಆಶಯದ ಹಿನ್ನೆಲೆಯಲ್ಲಿ, ಕರ್ನಾಟಕದಲ್ಲಿ ಪಕ್ಷವನ್ನು ಸಂಘಟಿಸುವ ತುಡಿತವೂ ಮಿಳಿತವಾಗಿತ್ತು. ಈ ಮುಂದಾಲೋಚನೆಗೆ ದೊರೆತ ಯಶಸ್ಸು ಕಡಿಮೆಯೇನಲ್ಲ. ರಥಯಾತ್ರೆಗೆ ರಾಜ್ಯದ ಜನತೆ ತೋರಿದ ಉತ್ಸಾಹದ ಪ್ರತಿಕ್ರಿಯೆಯ ಫಲವಾಗಿ ಪಕ್ಷದ ಸಂಘಟನೆಗೂ ಬಲ ಬಂದಿತು. ಮುಂದೆ, ಪಕ್ಷದ ಬಲವರ್ಧನೆ ಯಾವ ಪ್ರಮಾಣದಲ್ಲಿ ಕೈಗೂಡಿತೆಂಬುದನ್ನು ಎಲ್ಲರೂ ಬಲ್ಲರು.

# ಹಳ್ಳಿಗಳಲ್ಲಿ ಸ್ವಯಂ ಆಡಳಿತವ್ಯವಸ್ಥೆ – ಸ್ಥಿತಿ ಗತಿ

ಭಾರತವು ಕೃಷಿಪ್ರಧಾನ ದೇಶ. ಒಂದು ದೇಶದ ಸಂಸ್ಕೃತಿಯು ಆ ದೇಶದ ಕೃಷಿಯನ್ನು ಅವಲಂಬಿಸಿರುತ್ತದೆ ಎನ್ನುತ್ತಾರೆ. ಈ ನಿಟ್ಟಿನಲ್ಲಿ ಭಾರತವನ್ನು ಅರ್ಥಮಾಡಿಕೊಳ್ಳಲು ಕೇವಲ ಭೌಗೋಳಿಕ ಜ್ಞಾನ ಸಾಲದು, ಕೃಷಿಯನ್ನೇ ಅವಲಂಬಿಸಿರುವ ಗ್ರಾಮಗಳ ಅಧ್ಯಯನವನ್ನೂ ಮಾಡಬೇಕು.

ನಮ್ಮ ರಾಜ್ಯದಲ್ಲಿ ಒಟ್ಟು 27028 ಹಳ್ಳಿಗಳಿವೆ. ಪ್ರಾಚೀನ ಕಾಲದಿಂದಲೂ ಗ್ರಾಮಗಳಲ್ಲಿ ವ್ಯವಸ್ಥಿತವಾದ ಆಡಳಿತ ಪದ್ಧತಿಯಿತ್ತು ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಅಂದಿನ ಗ್ರಾಮಗಳ ಆಡಳಿತವನ್ನು ಹಿರಿಯರಾದ ಪಂಚರು ನಡೆಸುತ್ತಿದ್ದರು. ಇವರ ಜೊತೆಗೆ ಶಾನುಭೋಗರು, ಪಟೇಲರು (ಗೌಡರು) ಸೇರಿ ಊರಿನ ಜಾತ್ರೆ, ಹಬ್ಬ ಹರಿದಿನಗಳು, ಬಿತ್ತನೆ ಸೇರಿದಂತೆ ಎಲ್ಲ ಕೃಷಿಕಾರ್ಯ, ಸಂತೆ, ದವಸ ಧಾನ್ಯಗಳ ಸಂಗ್ರಹಣೆ ಮುಂತಾದ ಅನೇಕ ವಿಷಯಗಳನ್ನು ನಿರ್ಧರಿಸುತ್ತಿದ್ದರು. ನ್ಯಾಯ ಪಂಚಾಯತಿಕೆಗಳ ಮೂಲಕ ವಿವಾದಗಳನ್ನೂ ಬಗೆಹರಿಸುತ್ತಿದ್ದರು. ಹೀಗಾಗಿ, ಇಂದಿನ ಗ್ರಾಮ ಪಂಚಾಯತಿ ಸದಸ್ಯರಿಗಿಂತ ಹೆಚ್ಚಿನ ಬೆಲೆ ಅಂದಿನ ಪಂಚರಿಗಿತ್ತು. ಹೀಗೆ, ಸ್ವಾವಲಂಬಿ, ಸ್ವತಂತ್ರ, ಸಮೃದ್ಧ, ಆತ್ಮನಿರ್ಭರ, ಸ್ವಯಂ ಆಡಳಿತ ಹೊಂದಿದ ಗ್ರಾಮಗಳು ಭಾರತದಲ್ಲಿದ್ದವು.

ಗ್ರಾಮವ್ಯವಸ್ಥೆಯಲ್ಲಿ ದೇವಾಲಯಗಳಿಗೆ ಪ್ರಮುಖ ಸ್ಥಾನವಿತ್ತು. ಗ್ರಾಮದ ಹಿರಿಯರು ದೇವಾಲಯಗಳಲ್ಲಿಯೇ ಕಾಣಸಿಗುತ್ತಿದ್ದರು. ದೇವಾಲಯವೆಂದರೆ ಜಾತಿ, ಧರ್ಮ, ಪಕ್ಷಗಳನ್ನು ಮೀರಿ ಊರಿನ ಒಳಿತನ್ನೇ ಗಮನದಲ್ಲಿರಿಸಿಕೊಂಡು ನಿರ್ಧಾರಗಳನ್ನು ತೆಗೆದುಕೊಳ್ಳುವ ಕೇಂದ್ರ ಎಂಬ ನಂಬಿಕೆ ಜನರಲ್ಲಿತ್ತು. ಈ ರೀತಿಯ ಗ್ರಾಮೀಣಾಭಿವೃದ್ಧಿ ವ್ಯವಸ್ಥೆಯು ಕೃಷ್ಣದೇವರಾಯ, ಶಿವಾಜಿ ಮಹಾರಾಜರ ಕಾಲದಿಂದಲೂ ಇತ್ತು, ಈ ಕಾರಣದಿಂದಲೇ ಹಳ್ಳಿಗಳಲ್ಲಿ ಸುಖ ಸಮೃದ್ಧಿ ನೆಲೆಸಿತ್ತು ಎಂದು ನಮ್ಮ ಗಮನಕ್ಕೆ ಬರುತ್ತದೆ.

ಭಾರತವನ್ನು ದುರ್ಬಲಗೊಳಿಸಬೇಕೆಂದರೆ ಮೊದಲಿಗೆ ಹಳ್ಳಿಗಳನ್ನು ದುರ್ಬಲಗೊಳಿಸಬೇಕು ಎಂದು ಕಂಡುಕೊಂಡ ಬ್ರಿಟಿಷರು, ನಮ್ಮ ಗ್ರಾಮಗಳ ಆಡಳಿತ ವ್ಯವಸ್ಥೆಯನ್ನು ಬದಲಿಸಲು ಪ್ರಯತ್ನಿಸಿದರು. ನಮಗೆ ಸ್ವಾತಂತ್ರ್ಯ ಸಿಕ್ಕರೆ ಸಾಲದು, ಸ್ವರಾಜ್ಯವೂ ಸಿಗಬೇಕು ಎಂದು ಹೇಳಿದ ಗಾಂಧಿಯವರ ಕಲ್ಪನೆಯಲ್ಲಿ ರಾಮರಾಜ್ಯವೇ ಸ್ವರಾಜ್ಯ, ಆದರೆ ಲೋಕಮಾನ್ಯ ತಿಲಕರು ಸ್ವರಾಜ್ಯ ಎಂದರೆ ಗ್ರಾಮರಾಜ್ಯ ಎಂದು ಸ್ಪಷ್ಟವಾಗಿ ಹೇಳಿದ್ದರು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ಹಳ್ಳಿಗಳ ಉದ್ಧಾರವಾಗದೆ ದೇಶ ಉದ್ಧಾರವಾಗದು, ಹಳ್ಳಿಗಳ ಅಭಿವೃದ್ಧಿ ಆದ್ಯತೆಯ ಕೆಲಸವಾಗಬೇಕು ಎಂದು ಮಹಾತ್ಮಾ ಗಾಂಧಿಯವರೂ ಸೇರಿದಂತೆ ಎಲ್ಲರೂ ಪ್ರತಿಪಾದಿಸುತ್ತಿದ್ದರು. ವಿನೋಬಾ ಭಾವೆ, ದೀನ ದಯಾಳ್ ಉಪಾಧ್ಯಾಯ ಮುಂತಾದ ಹಿರಿಯರು ಈ ನಿಟ್ಟಿನಲ್ಲಿ ವಿಶೇಷವಾಗಿ ಕೆಲಸ ಮಾಡಿದರು.

೧೯೪೭ರಲ್ಲಿ ಸ್ವಾತಂತ್ರ್ಯ ಬಂದ ಮೇಲೆ ಹತ್ತು ವರ್ಷಗಳಾದರೂ ಆಳುವವರಿಗೆ ಹಳ್ಳಿಗಳ ಅಭಿವೃದ್ಧಿಯ ನೆನಪೇ ಬರಲಿಲ್ಲ. ೧೯೫೭ರಲ್ಲಿ ಅಂದಿನ ಗ್ರಾಮೀಣಾಭಿವೃದ್ಧಿ ಮಂತ್ರಿ ಶ್ರೀ ಸುರೇಂದ್ರ ಕುಮಾರ್ ಡೇಯವರು ಒಂದು ಸಮಿತಿ ರಚನೆ ಮಾಡಿದರು. ಅದೇ ವರ್ಷದ ನವೆಂಬರ್ ತಿಂಗಳಿನಲ್ಲಿ ವರದಿ ಸಲ್ಲಿಸಿದ ಸಮಿತಿಯು ಗ್ರಾಮಗಳಲ್ಲಿ ಸ್ವಯಂ ಆಡಳಿತ ವ್ಯವಸ್ಥೆಯ ಜಾರಿಗೆ ಶಿಫಾರಸು ಮಾಡಿತು. ಆದರೆ, ಈ ವರದಿಯು ಮುಂದಿನ ಇಪ್ಪತ್ತು ವರ್ಷಗಳ ವರೆಗೆ ಕಡತಗಳಲ್ಲಿಯೇ ಉಳಿಯಿತು. ೧೯೭೭ರಲ್ಲಿ ಅಶೋಕ್ ಮೆಹ್ತಾ ಅಧ್ಯಕ್ಷತೆಯಲ್ಲಿ ಇನ್ನೊಂದು ಸಮಿತಿ ರಚನೆಯಾಯಿತು. ಈ ಸಮಿತಿ ಸಲ್ಲಿಸಿದ ವರದಿಯ ಬಗ್ಗೆ ವ್ಯಾಪಕವಾದ ಚರ್ಚೆ ನಡೆಯಿತು.

ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ರಚಿತವಾದ ಜಿ.ವಿ.ಕೆ. ರಾವ್ ಸಮಿತಿಯು ಪಂಚಾಯತಿ ರಾಜ್ಯದ ಸಂಪೂರ್ಣ ಪರಿಕಲ್ಪನೆಯನ್ನು ನಿರೂಪಿಸಿತು. ರಾಮಕೃಷ್ಣ ಹೆಗಡೆ ಮತ್ತು ಶ್ರೀ ಅಬ್ದುಲ್ ನಜೀರ್ ಸಾಬ್ ರವರು ಆಸಕ್ತಿ ವಹಿಸಿ ದೇಶದಲ್ಲೇ ಮೊತ್ತಮೊದಲ ಬಾರಿಗೆ ೧೯೮೩ರಲ್ಲಿ ಪಂಚಾಯತ್ ಸಮಿತಿ ಕಾಯಿದೆಯನ್ನು ಅಂಗೀಕರಿಸಿ ೧೯೮೫ರಿಂದ ರಾಜ್ಯದಲ್ಲಿ ಜಾರಿಗೆ ತಂದರು. ಈ ವ್ಯವಸ್ಥೆಯ ಯಶಸ್ಸು ಇಡೀ ದೇಶದ ಗಮನವನ್ನು ಸೆಳೆಯಿತು. ೧೯೮೩ರಿಂದ ೧೯೯೨ರ ವರೆಗೆ ಅನೇಕ ಸಮಿತಿಗಳು ನೀಡಿದ ವರದಿಯ ಆಧಾರದ ಮೇಲೆ ೧೯೯೨ರ ಏಪ್ರಿಲ್ ೨೪ರಂದು ಸಂವಿಧಾನಕ್ಕೆ ೭೩ನೇ ತಿದ್ದುಪಡಿ ಮಾಡಿ, ೨೪ ಏಪ್ರಿಲ್ ೧೯೯೩ರಿಂದ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ದೇಶಾದ್ಯಂತ ಜಾರಿಗೆ ತರಲಾಯಿತು. ಅಂದಿನಿಂದ ಪ್ರತಿವರ್ಷ ಏಪ್ರಿಲ್೨೪ ದಿನವನ್ನು ರಾಷ್ಟ್ರೀಯ ಪಂಚಾಯತ್ ರಾಜ್ ದಿನವನ್ನಾಗಿ ಆಚರಿಸಲಾಗುತ್ತಿದೆ.




**ಡಾ. ವಿಷ್ಣುಕಾಂತ ಚಟಪಲ್ಲಿ**

**ಕುಲಪತಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ,ಗದಗ**

ಪಂಚಾಯತ್ ರಾಜ್ ವ್ಯವಸ್ಥೆಯು ಸ್ಥಾನೀಯ ಆಡಳಿತ ಮತ್ತು ವಿಕೇಂದ್ರೀಕೃತ ಆಡಳಿತ ಎಂಬ ಎರಡು ಮೂಲ ತತ್ತ್ವಗಳ ಆಧಾರದ ಮೇಲೆ ರೂಪಿತವಾಗಿದೆ. ಸಂಸದೀಯ ವ್ಯವಸ್ಥೆಯಲ್ಲಿ ಚುನಾಯಿತ ಸಂಸತ್ಸದಸ್ಯ ಅಥವಾ ವಿಧಾನ ಸಭಾ ಸದಸ್ಯರ ನಿರ್ದೇಶನದಂತೆ ಕೆಲಸ ನಡೆಯುತ್ತದೆ. ಆದರೆ ವ್ಯವಸ್ಥೆಯ ಕಟ್ಟಕಡೆಯ ಜನರ ಮಾತಿಗೆ ಬೆಲೆಯೇ ಇರುವುದಿಲ್ಲ. ಹೀಗಾಗಿ, ಜಿಲ್ಲಾ ಪರಿಷತ್ತು, ತಾಲೂಕು ಪರಿಷತ್ತು ಮತ್ತು ಮಂಡಲ ಪಂಚಾಯತ್ ಎಂಬ ಮೂರು ಹಂತದಲ್ಲಿ ಆಡಳಿತಾಧಿಕಾರವನ್ನು ವಿಕೇಂದ್ರೀಕರಿಸಲಾಗಿದ್ದ ಕರ್ನಾಟಕದ ಮಾದರಿಯನ್ನೇ ಇಡೀ ದೇಶಕ್ಕೆ ವಿಸ್ತರಿಸಲಾಗಿದೆ.

ಇಂದು ನಮ್ಮ ರಾಜ್ಯದಲ್ಲಿ ೬೦೨೨ ಗ್ರಾಮ ಪಂಚಾಯತಿಗಳು, ೨೪೪ ತಾಲೂಕು ಪಂಚಾಯತಿಗಳು ಮತ್ತು ೩೨ ಜಿಲ್ಲಾ ಪಂಚಾಯತಿಗಳಿವೆ. ಇವುಗಳಲ್ಲಿ ಒಟ್ಟು1050 ಜಿಲ್ಲಾ ಪಂಚಾಯತ್ ಸದಸ್ಯರು, 3900 ತಾಲೂಕು ಪಂಚಾಯತ್ ಸದಸ್ಯರು ಮತ್ತು 97690 ಜನ ಗ್ರಾಮ ಪಂಚಾಯ್ತಿ ಸದಸ್ಯರು ಚುನಾಯಿತರಾಗಿ ಆಡಳಿತದ ಭಾಗವಾಗಿದ್ದಾರೆ. ಮಹಿಳೆಯರಿಗೆ ಶೇ ೫೦ರಷ್ಟು ಮೀಸಲಾತಿಯಿರುವುದರಿಂದ ಸುಮಾರು ೪೮೦೦೦ ಮಹಿಳೆಯರೇ ಆಡಳಿತದ ಚುಕ್ಕಾಣಿ ಹಿಡಿದಿದ್ದಾರೆ. ಗ್ರಾಮಪಂಚಾಯತಿಗಳ ಅನುದಾನವು ಕೇಂದ್ರದಿಂದ ನೇರವಾಗಿ ಸಂದಾಯವಾಗುತ್ತಿದೆ. ಮೂವತ್ತು ವರ್ಷಗಳ ಹಿಂದೆ ೧೨ರಿಂದ ೧೪ ಲಕ್ಷ ರೂಪಾಯಿಗಳ ಅನುದಾನ ಬರುತ್ತಿದ್ದರೆ, ಇಂದು ಅದು ಸುಮಾರು ೪೦ರಿಂದ ೬೦ ಲಕ್ಷ ರೂಪಾಯಿಗಳಿಗೆ ಏರಿಕೆಯಾಗಿದೆ.

ಸ್ಥಳೀಯ ಆಡಳಿತ ವ್ಯವಸ್ಥೆ ಜಾರಿಗೆ ಬಂದ ೩೦ ವರ್ಷಗಳ ನಂತರವೂ ನಿರೀಕ್ಷಿತ ಅಭಿವೃದ್ಧಿಯಾಗಿಲ್ಲವೆಂಬುದು ನಿರಾಸೆಯ ವಿಚಾರ. ಮೂವತ್ತು ವರ್ಷಗಳಲ್ಲಿ ಇಷ್ಟೊಂದು ಹಣ ನೇರವಾಗಿ ಗ್ರಾಮ ಪಂಚಾಯತಿಗಳಿಗೆ ಹರಿದು ಬಂದಿದೆ, ಇಷ್ಟೊಂದು ಸದಸ್ಯರು ಆಯ್ಕೆಯಾಗಿದ್ದಾರೆ. ಆದರೆ, ಇಂದಿಗೂ ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿಲ್ಲ, ಒಳ್ಳೆಯ ರಸ್ತೆಗಳಿಲ್ಲ, ಮಾಲಿನ್ಯ ಹೆಚ್ಚಾಗುತ್ತಿದೆ. ಇದಕ್ಕೆ ಮುಖ್ಯ ಕಾರಣ, ವ್ಯವಸ್ಥೆಯ ಆಶಯಗಳನ್ನು ನಾವು ಸಂಪೂರ್ಣವಾಗಿ ಅರಿತಿಲ್ಲದಿರುವುದೇ ಆಗಿದೆ. ಸ್ವಯಂ ಆಡಳಿತ ಎಂದರೆ ಜನರು ಆಡಳಿತದಲ್ಲಿ ಪಾಲುಗೊಳ್ಳುವುದು. ಇಂದಿಗೂ ಜನರು ತಮ್ಮ ಊರಿನ ಅಭಿವೃದ್ಧಿಯ ಬಗ್ಗೆ ತಾವೇ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಜನರಲ್ಲಿ ಅರಿವು ಮೂಡಿಸುವ ಮತ್ತು ಚುನಾಯಿತ ಸದಸ್ಯರಿಗೆ ತರಬೇತಿ ನೀಡುವ ಕೆಲಸ ನಡೆಯುವುದು ಅತ್ಯಗತ್ಯ.

ಸಸ್ಯಲೋಕ ಪರಿಚಯ ಮಾಲಿಕೆ- 22

# ಅಜದ್ವೇಷಿ (ಆಡುಮುಟ್ಟದ ಬಳ್ಳಿ)

ಟ್ರೈಲೊಫೊರಾ ಎಂಬ ಜೀವಶಾಸ್ತ್ರೀಯ ಹೆಸರನ್ನು ಹೊಂದಿರುವ ಅಜದ್ವೇಷಿ ಅಥವಾ ಆಡುಮುಟ್ಟದ ಬಳ್ಳಿಯು ಬಂಗಾಳ, ಅಸ್ಸಾಂ, ಒರಿಸ್ಸಾ ಮುಂತಾದ ರಾಜ್ಯಗಳಲ್ಲಿ ವ್ಯಾಪಕವಾಗಿ ಬೆಳೆಯುತ್ತದೆ. (ಆಡುಸೋಗೆಯ ಔಷಧೀಯ ಗುಣಗಳನ್ನೇ ಹೊಂದಿರುವುದಾದರೂ ಇದು ಬೇರೆಯೇ ಸಸ್ಯ). ಇದನ್ನು ನಾಯಿಹಾಲೆ, ನೇಪಾಳದ ಬೇರು, ಶ್ವಾಸಘ್ನಿ ಎಂಬ ಹೆಸರುಗಳಿಂದಲೂ ಕರೆಯುತ್ತಾರೆ. ಆಡುಸೋಗೆಯಂತೆಯೇ ಈ ಸಸ್ಯವನ್ನೂ ಆಡು ತಿನ್ನುವುದಿಲ್ಲವಾದುದರಿಂದ ಆಡು ಮುಟ್ಟದ ಬಳ್ಳಿ ಎಂದು ಕರೆಯುತ್ತಾರೆ.

ಮರಳುಮಿಶ್ರಿತ ಮೆಕ್ಕೆ ಮಣ್ಣಿನಲ್ಲಿ ಸಮೃದ್ಧವಾಗಿ ಬೆಳೆಯುವ ಈ ಬಳ್ಳಿಯನ್ನು ಒಂದೆರಡು ಗಿಣ್ಣುಗಳನ್ನು ಹೊಂದಿರುವ ಗೇಣುದ್ದದ ಕಾಂಡಗಳನ್ನು ನೆಡುವುದರ ಮೂಲಕ ಬೆಳೆಸಬಹುದು. ಬಳ್ಳಿಯು ಹಬ್ಬಿಕೊಳ್ಳಲು ಆಧಾರ ಕೊಡಬೇಕಾಗುತ್ತದೆ. ಕುರುಚಲು ಕಾಡುಗಳು, ಹುಲ್ಲುಗಾವಲು, ಬೀಳುಭೂಮಿ, ಮುಳ್ಳಿನ ಪೊದೆಗಳ ಮೇಲೆ, ಬೇಲಿಗಳ ಮೇಲೆ, ಹೊಲದ ಬದುಗಳ ಮೇಲೆ, ಕೆರೆಕಟ್ಟೆಗಳ ಮೇಲೆ ಬಳ್ಳಿಯಂತೆ ಹಬ್ಬಿ ಸ್ವಾಭಾವಿಕವಾಗಿಯೂ ಬೆಳೆಯುತ್ತದೆ.



ಛಾಯಾ ಓಕ್ ಬಾಪಟ್

ಅಜದ್ವೇಷಿಯ ಬೇರು ಮತ್ತು ಎಲೆಗಳನ್ನು ಔಷಧವಾಗಿ ಬಳಸುತ್ತಾರೆ. ಇದರ ಯಾವುದೇ ಭಾಗವನ್ನು ಸೇವಿಸಿದರೆ ತತ್‌ಕ್ಷಣ ವಾಂತಿಯಾಗುವುದರಿಂದ ನಾಟಿವೈದ್ಯರು ಚೇಳು, ವಿಷಕ್ರಿಮಿಗಳು, ವಿಷಪೂರಿತ ಹಾವುಗಳು ಕಡಿದು ನಂಜೇರಿದಾಗ, ವಾಂತಿ ಮಾಡಿಸಲು ಬಳಸುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಇಂದಿಗೂ ಆಡು ಮುಟ್ಟದ ಬಳ್ಳಿಯ ಬೇರಿನ ಕಷಾಯ ಅಥವಾ ಎಲೆಗಳನ್ನು ಜಜ್ಜಿ ರಸವನ್ನು ತೆಗೆದು ಕುಡಿಸುವ ರೂಢಿಯಿದೆ. ಆಯುರ್ವೇದ, ಸಿದ್ಧ, ಯುನಾನಿ ಮತ್ತು ಇತರ ಪಾರಂಪರಿಕ ವೈದ್ಯ ಪದ್ಧತಿಗಳಲ್ಲಿ ಅನೇಕ ವ್ಯಾಧಿಗಳನ್ನು ಗುಣಪಡಿಸಲು ಬಳಸುತ್ತಿದ್ದಾರೆ.

ವಿವಿಧ ರೀತಿಯ ಸಂಧಿವಾತಗಳು, ಭೇಧಿ, ಬಿಟ್ಟುಬಿಟ್ಟು ಬರುವ ಜ್ವರ, ರೇಬೀಸ್(ಹೈಡ್ರೋಫೋಬಿಯಾ)ಗಳ ಚಿಕಿತ್ಸೆಯಲ್ಲಿ ಈ ಗಿಡವನ್ನು ಬಳಸುತ್ತಾರೆ. ಇದು ಉತ್ತಮ ಕಫ ನಿವಾರಕವಾಗಿರುವುದರಿಂದ ಆಸ್ತಮಾ ಕಾಯಿಲೆಯ ಚಿಕಿತ್ಸೆಗೂ ಇದು ಉತ್ತಮ. ದೇಹದಲ್ಲಿ ಕೀವು ತುಂಬಿದ ವ್ರಣ ಮತ್ತು ಗಾಯಗಳಿಗೆ, ಬೊಬ್ಬೆಗಳು ನಂಜಾಗದಂತೆ, ಒಡೆಯಲು ಆಡು ಮುಟ್ಟದ ಬಳ್ಳಿಯ ಎಲೆಗಳನ್ನು ಕೆಂಡದ ಮೇಲೆ ಹಾಕಿ ಬಿಸಿಮಾಡಿ ಕಟ್ಟು ಕಟ್ಟುತ್ತಾರೆ. ಇದರಲ್ಲಿ ಪ್ರಬಲ ವಿಷನಿವಾರಕ ಗುಣವಿದೆ ಎಂಬ ಜನಪದರ ಜ್ಞಾನವನ್ನು ವೈಜ್ಞಾನಿಕ ಸಂಶೋಧನೆಗಳು ರುಜುವಾತು ಪಡಿಸಿವೆ.



ಅಸ್ತಮಾವ್ಯಾಧಿ ಇರುವವರು ಅನುಭವಿಸುವ ವಿಧವಿಧವಾದ ತೊಂದರೆಗಳಿಗೆ ದಿನವೂ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಒಂದೊಂದು ಎಲೆಯನ್ನು ಜಗಿದು ತಿನ್ನುವುದರಿಂದ ಪರಿಹಾರ ದೊರೆಯುತ್ತದೆ.

## ಹಸಿರು ಭಾನುವಾರ - ತಿಂಗಳ ಅಂಕಿಅಂಶ

| ಹಸಿರು ಭಾನುವಾರದ ಸಂಖ್ಯೆ | ಸ್ಥಳ | ಭಾಗವಹಿಸಿದವರು | ನೆಡಲಾದ ಗಿಡಗಳ ಸಂಖ್ಯೆ/ ಚಟುವಟಿಕೆಗಳು |
|---|---|---|---|
| **390** 18/06/23 | ಬೆಂಗಳೂರು ವಿಶ್ವವಿದ್ಯಾಲಯದ ಬಯೋ ಪಾರ್ಕ್ ಕ್ಯಾಂಪಸ್‌ನಲ್ಲಿ | ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು, ಕುಮಾರನ್ ಸ್ಕೂಲ್ ವಿದ್ಯಾರ್ಥಿಗಳು, ಯೂಥ್ ಫಾರ್ ಸೇವಾ ಹಾಗೂ ಹಸಿರು ಸ್ವಯಂ ಸೇವಕರು ಸೇರಿ ಒಟ್ಟು 80 ಜನರು. | 10 ಹೊಂಗೆ ಗಿಡ, 10 ಕಾಡು ಬಾದಾಮಿ ಗಿಡಗಳನ್ನು ನೆಡಲಾಯಿತು. ಆವರಣದಲ್ಲಿಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು. |
| **391** 25/06/23 | ಬೆಂಗಳೂರಿನ ಗುಬ್ಬಲಾಳ ಉತ್ತರಹಳ್ಳಿಯ ಸುಬ್ರಮಣ್ಯಪುರ ಕೆರೆಯ ಆವರಣ | ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಬೆಂಗಳೂರು ದಕ್ಷಿಣ ಕ್ಷೇತ್ರ ಶಾಸಕ ಶ್ರೀ ಎಂ.ಕೃಷ್ಣಪ್ಪ, ನಿಕಟಪೂರ್ವ ಕಾರ್ಪೋರೇಟರ್ ಶ್ರೀ ಹನುಮಂತಯ್ಯ, ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಸಂಸ್ಥೆಯ ಕಾರ್ಯಕರ್ತರು ಮುಂತಾದವರು. | ನಾನಾ ಜಾತಿಯ ಸುಮಾರು 250ಕ್ಕೂ ಅಧಿಕ ಗಿಡಗಳನ್ನು ನೆಡಲಾಯಿತು. |
| **392** 02/07/23 | ಬೆಂಗಳೂರು ವಿಶ್ವವಿದ್ಯಾಲಯದ ಎನ್. ಜಿ. ಇ ಎಫ್ ಲೇಔಟ್ ಆವರಣ | ಯೂಥ್ ಫಾರ್ ಸೇವಾ ಸಂಸ್ಥೆ, ಬಿಎಂಎಸ್ ಕಾಲೇಜು , ನೃಪತುಂಗ ಕಾಲೇಜು ಸೇರಿದಂತೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಸಂಸ್ಥೆಯ ಸ್ವಯಂ ಸೇವಕರು | 10 ಗಿಡಗಳನ್ನು ನೆಡಲಾಯಿತು |
| **393** 09/07/23 | ಎಲೆಕ್ಟ್ರಾನಿಕ್ಸ್ ಸಿಟಿಯ ನ್ಯೂಟೌನ್ ನಲ್ಲಿರುವ ಮಾರಗೊಂಡನಹಳ್ಳಿ ಕೆರೆಯ ಬದಿ | ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, 'ಯೂತಿಯೋಪಿಯಾ' ನಿರ್ದೇಶಕ ಶ್ರೀ ಜಯನಂದನ್, ಐಐಟಿ ಕಾನ್ಪೂರದ ಶ್ರೀ ಸುಜಿತ್ ಕುಮಾರ್, ಸಂಸ್ಥೆಯ - 20 ಜನ ಕಾರ್ಯಕರ್ತರು, ಐಎಫ್‌ಐಎಂ ಕಾಲೇಜಿನ-30, ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ - 42, ನೃಪತುಂಗ ಯೂನಿವರ್ಸಿಟಿಯ-10, ಬಿಎಂಎಸ್ ಆರ್ಕಿಟೆಕ್ಚರ್ ಕಾಲೇಜಿನ - 55 ವಿದ್ಯಾರ್ಥಿಗಳು, (ಒಟ್ಟು 157) ಸು. 25ಕ್ಕೂ ಅಧಿಕ ಸ್ಥಳೀಯರು ಪಾಲ್ಗೊಂಡಿದ್ದರು. | 5 ಹೊಂಗೆ, 8 ಕಾಡು ಬಾದಾಮಿ, 2 ಬೇವಿನ ಗಿಡ, 5 ಮಾವು, 10 ಟಬಿಬಿಯಾ ಸೇರಿ ಒಟ್ಟು 45 ಗಿಡಗಳನ್ನು ನೆಡಲಾಯಿತು. |

ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Venkatesh Manu**
Inputs: **Poornaprajna / Srikanth K / Sujatha GT**
Photographs: **Gopal TS / Chakrapani Kengeri / Internet Sources / AKP / ACF**
Acknowledgements: **Raghavendra Prasad / Chaya Bapat**
Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

ವ್ಯಕ್ತಿ ವಿಶೇಷ ಮಾಲಿಕೆ

# ಪ್ರೊ.ಪಿ.ವಿ. ಕೃಷ್ಣಭಟ್ಟ



“ನಾನು ನನ್ನ ಜೀವನದ ಎರಡು ವಿಷಯಗಳನ್ನು ನೆನಪಿಸಿಕೊಳ್ಳಲು ಬಯಸುತ್ತೇನೆ. ಒಂದು, ನನಗೆ ಜೀವನದಲ್ಲಿ ಹೇಳಿಕೊಳ್ಳುವಂತಹ ಕಷ್ಟಗಳು ಬರಲಿಲ್ಲ. ಎರಡನೆಯದು, ನನಗೆ ವೈರಿಗಳೇ ಇಲ್ಲ.” ಹೀಗೆಂದು ಪ್ರೊ. ಪಿ ವಿ ಕೃಷ್ಣ ಭಟ್ಟರು ಹೇಳುತ್ತಲೇ ತಮ್ಮ ಜೀವನದ ನೆನಪಿನ ಸುರುಳಿಯನ್ನು ಬಿಚ್ಚಿಟ್ಟಾಗ ಹಾಗಾದರೆ “ಕಷ್ಟದ ನಿರೂಪಣೆ ಏನು?” ಎಂಬ ಪ್ರಶ್ನೆ ಉದ್ಭವಿಸದಿರದು.

೧೯೭೫ರ ಜೂನ್೨೫ರಂದು ಅಂದಿನ ಪ್ರಧಾನಿ, ಶ್ರೀಮತಿ ಇಂದಿರಾಗಾಂಧಿಯವರು ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿ, ತಮ್ಮನ್ನು ವಿರೋಧಿಸುತ್ತಿದ್ದ ಸಾವಿರಾರು ನಾಗರಿಕರನ್ನು ಸೆರೆಮನೆಗೆ ತಳ್ಳುವ ಅನುಶಾಸನ ಪರ್ವವನ್ನು ಪ್ರಾರಂಭಿಸಿದರು. ಅವರ ಯಾದಿಯಲ್ಲಿ ಇಡೀ ಆರೆಸ್ಸೆಸ್ ಸಂಘಟನೆಯ ಸದಸ್ಯರಿದ್ದರು. ಇದನ್ನು ಮೊದಲೇ ಅರಿತಿದ್ದ ಆರೆಸ್ಸೆಸ್ ಕೂಡ ಸೂಕ್ತ ಸಿದ್ಧತೆ ನಡೆಸಿತ್ತು. ಕಾರ್ಯಕರ್ತರನ್ನು ಹುರಿದುಂಬಿಸಿ ಚಳವಳಿ ನಡೆಸುತ್ತ ಕೆಲವು ನಾಯಕರು ಜೈಲು ಸೇರುವುದು; ಇನ್ನು ಕೆಲವರು ಭೂಗತರಾಗಿ ಚಳುವಳಿಯನ್ನು ಜ್ವಲಂತವಾಗಿರಿಸಲು ಬೇಕಾದ ಸಂಪನ್ಮೂಲಗಳ ಜವಾಬ್ದಾರಿಯನ್ನು ಹೊರುವುದು ಎಂಬುದಾಗಿ ಕಾರ್ಯಭಾರಗಳ ಹಂಚಿಕೆಯಾಗಿತ್ತು. ಅದರಂತೆ, ಕೃಷ್ಣಭಟ್ಟರಿಗೆ ಭೂಗತ ಚಟುವಟಿಕೆಗಳ ಹೊಣೆಯನ್ನು ಹೊರಿಸಲಾಗಿತ್ತು.

ಭಟ್ಟರ ಚಲನವಲನಗಳ ಮೇಲೆ ಮೊದಲಿನಿಂದಲೂ ಕಣ್ಣಿಟ್ಟಿದ್ದ ಗೂಢಚಾರರು ಅವರ ಭಾಷಣಗಳು, ಪ್ರವಾಸ ಕಾರ್ಯಕ್ರಮಗಳು, ಆರೆಸ್ಸೆಸ್ ನಾಯಕರ ಜೊತೆಗಿನ ಸಂಪರ್ಕ ಮತ್ತು ತುರ್ತುಪರಿಸ್ಥಿತಿ ವಿರೋಧಿ ಚಟುವಟಿಕೆಗಳ ವರದಿಯನ್ನು ಸರಕಾರಕ್ಕೆ ತಲುಪಿಸುತ್ತಿದ್ದರು. ಹೀಗಾಗಿ ಮನೆಯಲ್ಲಿದ್ದರೆ ತಮ್ಮ ಬಂಧನ ಖಚಿತ ಎಂದು ಊಹಿಸಿದ್ದ ಭಟ್ಟರು ರಾತ್ರಿ ಮಲಗಲು ತಮ್ಮ ಮಾವನ ಮನೆಗೆ ಹೋಗುತ್ತಿದ್ದರು. ಎಂದಿನಂತೆ ೧೯೭೫ರ ಜುಲೈ ತಿಂಗಳ ೨೬ರಂದು ಒಂದು ಕಾರ್ಯಕ್ರಮ ನಡೆಸಿ ಮನೆಗೆ ಬಂದು ದಿನದ ಪತ್ರವ್ಯವಹಾರಗಳನ್ನು ಮುಗಿಸಿ ಮಲಗಿಕೊಂಡಿದ್ದರು. ನಿರೀಕ್ಷಿಸಿದ್ದಂತೆ ಅವರನ್ನು ಬಂಧಿಸಲು ಪೋಲೀಸರು ಮಧ್ಯ ರಾತ್ರಿ ಅಲ್ಲಿಗೂ ಆಗಮಿಸಿ ವಿಚಾರಿಸತೊಡಗಿದರು. ಆ ವೇಳೆಗೆ ಬಚ್ಚಲುಮನೆಯಲ್ಲಿದ್ದ ಭಟ್ಟರು ಹೊರಗೆ ಬಂದು ಪೋಲೀಸರ ಎದುರಿಗೇ ನಿಂತರೂ ಅವರಿಗೆ ಗುರುತು ಸಿಗಲಿಲ್ಲ. ಮಾವನೂ ಭಟ್ಟರ ಬಗ್ಗೆ ತುಟಿಪಿಟಕ್ಕೆನ್ನಲಿಲ್ಲ. ಮುಂದಿನ ತನಿಖೆಗಾಗಿ ಮಾವನನ್ನು ಪೋಲೀಸರು ಎಳೆದುಕೊಂಡು ಹೋದರು. ಅದಕ್ಕೆ ಮೊದಲು ಪೋಲೀಸರು ಭಟ್ಟರ ಮನೆಗೂ ಹೋಗಿ ಬೂಟುಗಾಲಿನಲ್ಲಿ ದೇವರಕೋಣೆಗೂ ನುಗ್ಗಿ ದಾಂಧಲೆ ನಡೆಸಿ ಬಂದಿದ್ದರು. ಮಾವನ ಮನೆಯ ಪಕ್ಕದಲ್ಲಿಯೇ ವಾಸವಾಗಿದ್ದ ಅವರ ಭಾವನನ್ನೂ ಪೋಲೀಸರು ವಿಚಾರಣೆಗಾಗಿ ಎಳೆದುಕೊಂಡು ಹೋದರು.

ಪೋಲೀಸರು ತಮ್ಮ ಕುಟುಂಬವರ್ಗಕ್ಕೆ ನೀಡುತ್ತಿದ್ದ ಹಿಂಸೆಯನ್ನು ಗಮನಿಸಿದ ಭಟ್ಟರು ಮರುದಿನ ಪೋಲೀಸರ ಎದುರು ತಾವಾಗಿಯೇ ಹಾಜರಾದರು. ಒಂದು ದಿನ ಲಾಕಪ್‌ನಲ್ಲಿ ಕಳೆದ ಭಟ್ಟರನ್ನು ಶಿವಮೊಗ್ಗದಲ್ಲಿಯೇ ಒಂದು ವಾರದ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು. ನಂತರ, ಮೀಸಾ ಕಾಯಿದೆಯ ಅಡಿಯಲ್ಲಿ ಆರೋಪ ಹೊರಿಸಿ ಬಳ್ಳಾರಿ ಜೈಲಿಗೆ ಅವರನ್ನು ಸ್ಥಳಾಂತರಿಸಲಾಯಿತು. ಮುಂದಿನ ಒಂದೂವರೆ ವರ್ಷದವರೆಗೆ ಬಳ್ಳಾರಿಯ ಕಾರಾಗೃಹವು ಭಟ್ಟರ ವಿಳಾಸವಾಯಿತು.

ಈ ಘಟನೆ ನಡೆದಾಗ ಭಟ್ಟರು ಶಿವಮೊಗ್ಗದ ಡಿ ವಿ ಎಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಬಳ್ಳಾರಿಯ ಜೈಲಿನಲ್ಲಿದ್ದಾಗ ಭಟ್ಟರು ತಮ್ಮೊಡನೆ ಬಂಧನದಲ್ಲಿದ್ದ ಪದವಿ ತರಗತಿಯ ವಿದ್ಯಾರ್ಥಿಗಳಿಗೆ ಪಾಠಮಾಡಿದರು. ನ್ಯಾಯಾಲಯದ ವಿಚಾರಣೆಗೆಂದು ಬೆಂಗಳೂರು ಜೈಲಿನಲ್ಲಿದ್ದ ಸಂದರ್ಭದಲ್ಲಿ ಶ್ರೀ ಎಚ್. ಡಿ. ದೇವೇಗೌಡರಿಗೂ ಹಿಂದಿ ಪಾಠ ಮಾಡಿದ್ದರು.

ಶ್ರೀ ಕೃಷ್ಣಭಟ್ಟರು ಜನಿಸಿದ್ದು ತೀರ್ಥಹಳ್ಳಿ ತಾಲೂಕಿನ ಪಟ್ಲಮನೆ ಎಂಬ ಪುಟ್ಟ ಹಳ್ಳಿಯಲ್ಲಿ. ತಂದೆ ಪುರೋಹಿತರು, ಸ್ವಲ್ಪ ಅಡಿಕೆ ತೋಟವೂ ಇತ್ತು. ಶ್ಯಾನುಭೋಗಿಕೆಯಿಂದಲೂ ಕೊಂಚ ಆದಾಯವಿತ್ತು. ತಂದೆಯವರು ೧೯೪೮ರಲ್ಲಿ ನಿಧನರಾದ ಬಳಿಕ ಶಿವಮೊಗ್ಗಕ್ಕೆ ಸ್ಥಳಾಂತರಗೊಂಡರು. ಪ್ರಾಥಮಿಕ ವಿದ್ಯಾಭ್ಯಾಸ ಪಕ್ಕದ ಹೇರಂಬಾಪುರದ ಶಾಲೆಯಲ್ಲಿ. ನಂತರ ಮಿಡಲ್‌ಸ್ಕೂಲ್ ಮತ್ತು ಇಂಟರ್ಮೀಡಿಯೇಟ್ ವಿದ್ಯಾಭ್ಯಾಸ ಶಿವಮೊಗ್ಗದಲ್ಲಿ. ಕಾರಣಾಂತರಗಳಿಂದ ಇಂಟರ್ಮೀಡಿಯೇಟ್ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಶಿವಮೊಗ್ಗದ ವಕೀಲರೊಬ್ಬರ ಬಳಿ ಗುಮಾಸ್ತೆ ಕೆಲಸ. ನಂತರ ಬಿಎ ಪರೀಕ್ಷೆ ಪಾಸ್‌ಮಾಡಿದರು. ಶಿವಮೊಗ್ಗದ ಡಿವಿಎಸ್ ಹೈಸ್ಕೂಲಿನಲ್ಲಿ ಕೆಲಕಾಲ ತಾತ್ಕಾಲಿಕ ಕ್ಷಕ ವೃತ್ತಿ ನಡೆಸಿ ಎಂಎ ಮಾಡಲು ಬೆಂಗಳೂರಿಗೆ ತೆರಳಿದರು. ಬೆಳ್ಳಾವೆ ನರಹರಿ ಶಿಶಾಸ್ತ್ರಿಯವರ ಮನೆಯ ಒಂದು ಕೋಣೆಯಲ್ಲಿ ವಾಸ. ವಾರಾನ್ನ ಮತ್ತು ಟ್ಯುಟೋರಿಯಲ್‌ನಲ್ಲಿ ಕೆಲಸ ಮಾಡಿ ಜೀವನ ನಿರ್ವಹಣೆ. ಆದರೂ ಎರಡನೇ ವರ್ಷದಲ್ಲಿ ತಂಗಿಯ ಮದುವೆ ಜವಾಬ್ದಾರಿ ಹೆಗಲಿಗೆ ಬಿದ್ದು ಇದ್ದ ಒಂದು ತೋಟವೂ ಪರಭಾರೆಯಾಯಿತು. ಹಾಜರಿ ಕೊರತೆಯಿಂದ ಎಂಎ ಪೂರ್ಣಗೊಳಿಸಲಾಗಲಿಲ್ಲ. ಅತ್ತ ಭೂಮಸೂದೆಯ ಕಾರಣದಿಂದ ಹೊಲಗದ್ದೆಗಳೂ ಕೈತಪ್ಪಿ ಅದರಿಂದ ಬರುತ್ತಿದ್ದ ಗೇಣಿಯೂ ನಿಂತಿತು.

ಮುಂದಿನ ವರ್ಷ ಬೆಂಗಳೂರಿಗೆ ಬರುವುದು ಅನಿವಾರ್ಯವಾಯಿತು. ಸೆಂಟ್ರಲ್‌ಕಾಲೇಜಿನ ಉಪನ್ಯಾಸಕ, ಶ್ರೀ ಜಿ ಆರ್ ಸೀತಾರಾಮ್ ಅವರ ಸಹಾಯದಿಂದ ಎಂಎ ಮುಂದುವರಿಸಿದರು. ಜೊತೆಗೆ ಆಚಾರ್ಯ ಪಾಠಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಮತ್ತೆ ಶಿವಮೊಗ್ಗಕ್ಕೆ ಮರಳಿ ನ್ಯಾಷನಲ್ ಹೈಸ್ಕೂಲ್, ಡಿ ವಿ ಎಸ್ ಸಂಸ್ಥೆಯ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಸಮಾಜಶಾಸ್ತ್ರ, ತರ್ಕಶಾಸ್ತ್ರ, ಇಂಗ್ಲಿಷ್ ಮುಂತಾದ ವಿಷಯಗಳಲ್ಲಿ ಬೋಧನೆ ನಡೆಸಿದರು. ಈ ಮಧ್ಯೆ ನ್ಯಾಷನಲ್ ಹೈಸ್ಕೂಲಿನಲ್ಲಿ ಹೊಸದಾಗಿ ಪ್ರಾರಂಭವಾದ ಪದವಿ ತರಗತಿಗಳಿಗೆ ಶಿಕ್ಷಕನಾಗಿ ಸೇರಿಸಿಕೊಂಡು ನಂತರ ಹೈಸ್ಕೂಲಿನಲ್ಲಿಯೇ ಶಿಕ್ಷಕರಾಗಿ ಮುಂದುವರಿಯುವಂತೆ ಹೇಳಿದಾಗ ಅದನ್ನು ಪ್ರತಿಭಟಿಸಿ ರಾಜೀನಾಮೆ ನೀಡಿದರು. ೧೯೬೬ ರಿಂದ ೧೯೭೭ರ ವರೆಗೆ ಡಿ ವಿ ಎಸ್ ಕಾಲೇಜಿನಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಇದೇ ಅವಧಿಯಲ್ಲಿ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಟ ಮಾಡಿ ಜೈಲು ಸೇರಿದ್ದನ್ನು ನೆಪ ಮಾಡಿಕೊಂಡು ಆಡಳಿತ ವರ್ಗ ಹಲವಾರು ವರ್ಷಗಳ ವರೆಗೆ ವೇತನ ತಡೆಹಿಡಿಯಿತು. ಅದರ ವಿರುದ್ಧವಾಗಿಯೂ ದೀರ್ಘಕಾಲ ಹೋರಾಟ ನಡೆಸಿ ವಿಜಯಿಯಾದರು.

ತೀರ ಎಳವೆಯಿಂದಲೂ ಆರೆಸ್ಸೆಸ್ ಸಂಪರ್ಕದಲ್ಲಿದ್ದ ಪ್ರೊ. ಭಟ್ಟರು ೧೯೫೮ರಲ್ಲಿ ಸಂಘದ ಶಾಖೆಯಲ್ಲಿ ಜವಾಬ್ದಾರಿ ವಹಿಸಿಕೊಂಡರು. ವೇದಿಕೆಗಳಲ್ಲಿ ಗುರೂಜಿಯವರ ಹಿಂದಿ ಭಾಷಣವನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಗೌರವವೂ ಇವರಿಗೆ ದೊರೆಯಿತು. ೧೯೭೦ರಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಪ್ರಾಂತೀಯ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆಯಾದರು. ನಂತರ ಅದರ ಅಧ್ಯಕ್ಷರೂ ಆಗಿ ಕಾರ್ಯನಿರ್ವಹಿಸಿದರು. ಇವರ ಮಾರ್ಗದರ್ಶನದಲ್ಲಿ ಕರ್ನಾಟಕದಾದ್ಯಂತ ಪರಿಷತ್ತಿನ ಚಟುವಟಿಕೆಗಳು ವಿಸ್ತರಿಸಿದವು. ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಮೂಡಿಸಿಕೊಂಡ ವಿದ್ಯಾರ್ಥಿಗಳು ಶಿಕ್ಷಣ ಶುಲ್ಕ ಏರಿಕೆ, ನಿರುದ್ಯೋಗ, ಭ್ರಷ್ಟಾಚಾರ, ಶಿಕ್ಷಣ ಕ್ಷೇತ್ರದ ಸಮಸ್ಯೆಗಳು ಮುಂತಾದ ಹಲವು ವಿಷಯಗಳನ್ನಿಟ್ಟುಕೊಂಡು ವ್ಯಾಪಕವಾದ ಚಳುವಳಿಗಳನ್ನು ನಡೆಸಿದರು. ವಿದ್ಯಾರ್ಥಿ ಪರಿಷತ್ತು ನಾಳಿನ ನಾಯಕರನ್ನು ನಿರ್ಮಿಸುವ ಕುಲುಮೆಯಂತಾಯಿತು. ಇಂದು ರಾಜಕೀಯದಲ್ಲಿ, ವಿವಿಧ ಸಂಘ ಸಂಸ್ಥೆಗಳಲ್ಲಿ, ಆರೆಸ್ಸೆಸ್‌ನಲ್ಲಿ ಕೂಡ ಭಟ್ಟರಿಂದ ಪ್ರೇರಣೆ ಪಡೆದವರೇ ಮುಂಚೂಣಿಯಲ್ಲಿದ್ದಾರೆ ಎಂದರೆ ವಿದ್ಯಾರ್ಥಿಗಳ ಮೇಲೆ ಭಟ್ಟರ ಪ್ರಭಾವ ಎಷ್ಟಿತ್ತು ಎಂಬುದರ ಅರಿವಾಗುತ್ತದೆ. ಹೀಗೆ ವೈಯಕ್ತಿಕ ಜೀವನದಲ್ಲಿ, ವೃತ್ತಿ ಕ್ಷೇತ್ರದಲ್ಲಿ, ಸಾಮಾಜಿಕ ಬದುಕಿನಲ್ಲಿ ನಿರಂತರವಾಗಿ ಹೋರಾಟದಲ್ಲಿ ನಿರತರಾಗಿ ವಿದ್ಯಾರ್ಥಿ ವೃಂದಕ್ಕೆ ಮಾದರಿ ಹಾಕಿಕೊಟ್ಟವರು, ಶ್ರೀ ಭಟ್ಟರು. ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರೂ ಆಗಿದ್ದರು. ಇಂದು ಸೆಂಟ್ರಲ್ ಯುನಿವರ್ಸಿಟಿ ಆಫ್ ಒರಿಸ್ಸಾದ ಕುಲಪತಿಗಳಾಗಿದ್ದಾರೆ.

ಯಾವತ್ತೂ ಪ್ರಶಸ್ತಿಗಳನ್ನು ಅರಸಿಕೊಂಡು ಹೋಗದಿದ್ದ ಭಟ್ಟರಿಗೆ ಅವರ ಅಪಾರ ಶಿಷ್ಯವೃಂದವು ಸಲ್ಲಿಸುತ್ತಿರುವ ಗೌರವವೇ ದೊಡ್ಡ ಪ್ರಶಸ್ತಿ. ೨೦೨೧ರಲ್ಲಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿತು. ಭಟ್ಟರು ನಿರಾಕರಿಸಿದ್ದರೂ ಕುವೆಂಪು ವಿಶ್ವವಿದ್ಯಾಲಯವು ಇವರ ಮನೆಗೇ ಬಂದು ಗೌರವ ಡಾಕ್ಟರೇಟ್ ಪ್ರದಾನ ಮಾಡಿತು. ತಮಗೆ ಎಂಭತ್ತು ವರ್ಷ ತುಂಬಿದಾಗ ತಮ್ಮ ಜೀವಮಾನದ ಉಳಿತಾಯದ ೧೨.೫ ಲಕ್ಷ ರೂಪಾಯಿಗಳನ್ನು ವಿದ್ಯಾರ್ಥಿಗಳ ಶಿಕ್ಷಣಕ್ಕೆ ವಿನಿಯೋಗಿಸಲು ಬೆಂಗಳೂರು ವಿಶ್ವವಿದ್ಯಾಲಯದ ಶಾಶ್ವತ ನಿಧಿಗೆ ದೇಣಿಗೆ ನೀಡಿದರು. ಇಂತಹ ಆದರ್ಶ ಗುರುವಿನ ಮಾರ್ಗದರ್ಶನ ಪಡೆದವರೇ ಧನ್ಯರು!

**-ಕೆ. ಜನಾರ್ದನ ತುಂಗ**

# ಅದಮ್ಯಚೇತನ ತಿಂಗಳ ವರದಿ (15 ಜೂನ್ 2023 ರಿಂದ 15 ಜುಲೈ 2023)



**ಮನಸೂರೆಗೊಂಡ A-CHAT ಸಾಂಸ್ಕೃತಿಕ ಸಮಾರಂಭ:** ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಅನಂತಕುಮಾರ್ ಪ್ರತಿಷ್ಠಾನದ 'A-CHAT' ಕಾರ್ಯಕ್ರಮವು 24-06-2023 ರಂದು ಸಂಸ್ಥೆಯ ಆವರಣದಲ್ಲಿ ನಡೆಯಿತು.

ಖ್ಯಾತ ಕವಿ ಡಾ. ಸಂತೋಷ ಚೊಕ್ಕಾಡಿಯವರು ವಾಚಿಸಿದ ಭಾವಗೀತೆಗಳಿಗೆ ಗಾಯಕರಾದ ಉಪಾಸನಾ ಮೋಹನ್ ಹಾಗೂ ನಿಶ್ಚಿತಾ ಪ್ರಸಾದ್ ಭಾವಪೂರ್ಣವಾಗಿ ಹಾಡಿದರು.

ಮಹಾಭಾರತವು ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸುವ ಉತ್ತಮ ಸಂದೇಶಗಳನ್ನು ಒಳಗೊಂಡಿದೆ ಎಂದು ಖ್ಯಾತ ಲೇಖಕಿ ಹಾಗೂ ಅಂಕಣಕಾರರಾದ ಡಾ. ವಿ.ಬಿ. ಆರತೀ ಅಭಿಪ್ರಾಯಪಟ್ಟರು. ಇಡೀ ಮಹಾಭಾರತವು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳನ್ನು ಅವಲಂಬಿಸಿದೆ. ಅರ್ಥ, ಕಾಮ ಈ ಎರಡೂ ಧರ್ಮವನ್ನು ಮೀರಬಾರದು. ಅಂತರಂಗದ ಸಾಕ್ಷಾತ್ಕಾರವೇ ಮೋಕ್ಷವಾಗಿದೆ ಎಂದು ವಿವರಿಸಿದರು.

ವಿವೇಕಾನಂದ ಶಾಲೆಯ ವಿದ್ಯಾರ್ಥಿನಿಯರಾದ ಸಿಂಚನಾ, ಹರ್ಷಿತಾ, ಪ್ರತೀಕ್ಷಾ ಹಾಗೂ ಸ್ನೇಹಾ ಭಗವದ್ಗೀತೆಯ ಶ್ಲೋಕಗಳನ್ನು ಸುಶ್ರಾವ್ಯವಾಗಿ ಪಠಿಸಿದರು.

ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷ, ಪ್ರೊ. ಪಿ.ವಿ. ಕೃಷ್ಣಭಟ್, ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಮತ್ತಿತರ ಗಣ್ಯರು ಭಾಗವಹಿಸಿದ್ದ ಕಾರ್ಯಕ್ರಮವನ್ನು ಶ್ರೀ ಟಿ.ಎಸ್. ಗೋಪಾಲ್ ನಿರೂಪಿಸಿದರು.

**ಗಣ್ಯರ ಭೇಟಿ**: ಕರ್ನಾಟಕ ರಾಜ್ಯ ವಿಧಾನಸಭೆಯ ಮಾಜಿ ಅಧ್ಯಕ್ಷರಾಗಿದ್ದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಬೆಳಗಾವಿ ದಕ್ಷಿಣ ಕ್ಷೇತ್ರದ ವಿಧಾನಸಭಾ ಸದಸ್ಯರಾದ ಶ್ರೀ ಅಭಯಚಂದ್ರ, ಪಾಟೀಲ್, ಹಿಂದಿನ ಮುಖ್ಯಮಂತ್ರಿಗಳ ಮಾಧ್ಯಮ ಸಂಯೋಜಕ ಹಾಗೂ ಹೊಸದಿಗಂತ ದಿನಪತ್ರಿಕೆಯ ಹಿರಿಯ ಸಂಪಾದಕರಾಗಿದ್ದ ಶ್ರೀ ಶಾಂತಾರಾಮ್, ವಿಧಾನ ಪರಿಷತ್ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ಶ್ರೀ ರಘುನಾಥ ಮಲ್ಕಾಪುರೆ ಮುಂತಾದವರು ಅದಮ್ಯ ಚೇತನ ಮತ್ತು ಅನಂತಪ್ರೇರಣಾ ಕೇಂದ್ರಗಳಿಗೆ ಈ ಅವಧಿಯಲ್ಲಿ ಭೇಟಿನೀಡಿದ ಗಣ್ಯರು







ಮಾಗಡಿ ರಸ್ತೆಯ ಹಿಲ್ ರಾಕ್ ನ್ಯಾಷನಲ್ ಪಬ್ಲಿಕ್ ಶಾಲೆಯ 90 ಹಾಗೂ ಹೊಸಕೆರೆಹಳ್ಳಿಯ ಲಿಟಲ್ ಫ್ಲವರ್ ಪಬ್ಲಿಕ್ ಸ್ಕೂಲಿನ 307 ವಿದ್ಯಾರ್ಥಿಗಳು ತಮ್ಮ ಶಿಕ್ಷಕರೊಂದಿಗೆ ಅನ್ನಪೂರ್ಣ ಅಡುಗೆ ಮನೆಗೆ ಭೇಟಿನೀಡಿದ್ದರು.

ಅಮೆರಿಕದ ಮೆಲ್ಟನ್ ಫೌಂಡೇಶನ್ ಕಾರ್ಯಕಾರಿ ನಿರ್ದೇಶಕ ಡಾ. ಸ್ಟೀಫನ್ ಬೆತ್ ಮ್ಯಾನ್, ಕಾರ್ಯಕ್ರಮ ಸಂಯೋಜನಾ ವಿಭಾಗದ ನಿರ್ದೇಶಕ ಲಾರ್ಸ್ ಡೈಸೆಲ್, ನಿರ್ದೇಶಕಿ ಸೋನಾಲಿ ಕೇಶವಮೂರ್ತಿ, ಸಂವಹನ ವಿಭಾಗ ಮುಖ್ಯಸ್ಥರಾದ ಆಶಿತಾ ನಾಯಕ್, ಸಂಯೋಜಕ ಎ. ರಬ್ ನವಾಜ್ ಮುಂತಾದವರು ಕೂಡ ಅದಮ್ಯ ಚೇತನಕ್ಕೆ ಭೇಟಿ ನೀಡಿ ಅಡುಗೆ ಮನೆಯನ್ನು ವೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

**ಚಿಣ್ಣರ ಚೇತನ ಗೋಡೆ ಪತ್ರಿಕೆಯ ಬಿಡುಗಡೆ:** ಬೆಂಗಳೂರಿನ ವಿಜಯ ವಿದ್ಯಾಲಯ ಸಂಸ್ಥೆಗಳ ಸಮೂಹಗಳ ಮುಖ್ಯಸ್ಥ ಶ್ರೀ ರಘುನಂದನ್ ಅವರು ಜುಲೈ ೧೩ ರಂದು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿ, ಚಿಣ್ಣರ ಚೇತನ ಗೋಡೆ ಪತ್ರಿಕೆಯ ಜುಲೈ ಸಂಚಿಕೆಯನ್ನು ಬಿಡುಗಡೆಗೊಳಿಸಿದರು.

**ಇತರ ಚಟುವಟಿಕೆಗಳು:** ಭಗವದ್ಗೀತೆ ಪಠಣ, ಹಸಿರು ಭಾನುವಾರ, ಶ್ರೀ ಚೇತನ ಸಭೆ, ಶ್ರದ್ಧೆಯ ಶಿಲ್ಪ (ಆಕಾಶವಾಣಿ ಕಾರ್ಯಕ್ರಮ), ದೇಗುಲ ದರ್ಶನ, ನಿತ್ಯ ಅನ್ನದಾನ, ಹಸಿರು ಭಾನುವಾರ, ಪ್ಲೇಟ್ ಬ್ಯಾಂಕ್ ಮುಂತಾದ ಕಾರ್ಯಕ್ರಮಗಳು ಅನೂಚಾನವಾಗಿ ಮುಂದುವರೆದುಕೊಂಡು ಬಂದಿವೆ.

**ಅದಮ್ಯ ಚೇತನದ ಕಾರ್ಯಕರ್ತರ ಸಭೆ:** ಅದಮ್ಯ ಚೇತನದ ಕಾರ್ಯಕರ್ತರ ಸಭೆಯು ಸಂಸ್ಥೆಯ ಸಭಾಂಗಣದಲ್ಲಿ ಜೂನ್ 23 ರಂದು ಸಂಜೆ ನಡೆಯಿತು. ಅದಮ್ಯ ಚೇತನ ಮ್ಯಾನೇಜಿಂಗ್ ಟ್ರಸ್ಟಿಗಳಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಪ್ರೊ. ಪಿ.ವಿ. ಕೃಷ್ಣಭಟ್ಟ, ಡಿ.ಆರ್. ಸುಬ್ರಮಣ್ಯಂ, ಜಿ.ಎಂ. ಇನಾಂದಾರ, ಟಿ.ಎಸ್. ಗೋಪಾಲ್, ನರಸಿಂಹ ಪ್ರಸಾದ್, ಪ್ರಕಾಶ್, ಪೂರ್ಣಪ್ರಜ್ಞ ಮತ್ತಿತರರು ಭಾಗವಹಿಸಿದ್ದರು.



## ನಿತ್ಯ ಅನ್ನದಾನವೆಂಬ ನಿರಂತರ ಸೇವಾಕಾರ್ಯ

| ಕ್ರ. ಸಂ | ನಿತ್ಯ ಅನ್ನದಾನದ ಕೇಂದ್ರ/ ಊಟದ ಸಮಯ | ಮೇ ತಿಂಗಳಲ್ಲಿ ವಿತರಣೆಯಾದ ಊಟದ ಅಂದಾಜು ಸಂಖ್ಯೆ | ಇಂದಿನ ವರೆಗೆ ವಿತರಣೆಯಾದ ಒಟ್ಟು ಊಟದ ಅಂದಾಜು ಸಂಖ್ಯೆ |
|---|---|---|---|
| 1 | ಅದಮ್ಯ ಚೇತನ ಕೆಂಪೇಗೌಡ ನಗರ, ಗವಿಪುರ 2.00 ರಿಂದ 3.00 | 4,500 | 1,43,100 |
| 2 | ಜಯನಗರ 4ನೇ ಹಂತ, ಕನ್ನಡ ಕಟ್ಟೆ, ಜೈನ್ ಟೆಂಪಲ್ ಮುಂಭಾಗ 12.30 ರಿಂದ 1.30 | 3,000 | 93,500 |
| 3 | ನಗರ್ತಪೇಟೆ ಮುಖ್ಯರಸ್ತೆಯ ನಗರೇಶ್ವರ ದೇವಸ್ಥಾನ 12.30 ರಿಂದ 1.30 | 3,000 | 74,700 |
| 4 | ಶ್ರೀ ಲೇಕ್ ವ್ಯೂ ಮಹಾಗಣಪತಿ ದೇವಸ್ಥಾನ, ಟ್ಯಾಂಕ್ ಬಂಡ್ ರಸ್ತೆ ಹಲಸೂರು ಕೆರೆ ಪಕ್ಕ ಬೆಂಗಳೂರು 12.30 ರಿಂದ 1.30 | 4,500 | 25,050 |
| 5 | ಅನಂತ ಪ್ರೇರಣಾ ಕೇಂದ್ರ, ಸೌಂತ್ ಎಂಡ್ ವೃತ್ತ 12.45 ರಿಂದ 2.00 (ಕಾಲೇಜು ವಿದ್ಯಾರ್ಥಿಗಳಿಗೆ ಮಾತ್ರ) | 1,040 | 14,600 |
| | **ಒಟ್ಟು ಅಂದಾಜು** | **16,040** | **3,50,950** |

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ರಾಜಸ್ತಾನದ ಜೋಧಪುರದಲ್ಲಿ 2023ರ ಜುಲೈ 2ರಂದು ಶಾಲೆಗಳು ಆರಂಭವಾಗಿದ್ದು, ಅಲ್ಲಿಯ ಅದಮ್ಯ ಚೇತನ ಸಂಸ್ಥೆಯ 'ನಿತ್ಯ ಅನ್ನದಾನ' ಕ್ಕಾಗಿ, ಜೂನ್ 30 ರಂದು ಅಡುಗೆಮನೆಯ ಎಲ್ಲ ಸಿದ್ಧತೆ ಮಾಡಿಕೊಂಡು, ಪೂಜೆ ಸಲ್ಲಿಸಲಾಯಿತು.



ರಾಜ್ಯ ವಿಧಾನಸಭೆಯ ಮಾಜಿ ಸಭಾಧ್ಯಕ್ಷ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕುಟುಂಬ ಸಮೇತ 2023ರ ಜು. 03 ರಂದು ಸಂಜೆ ಗವಿಪುರ ಬಡಾವಣೆಯ ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿ, 'ಅನ್ನಪೂರ್ಣ' ಅಡುಗೆ ಮನೆಯ ಚಟುವಟಿಕೆಗಳನ್ನು ವೀಕ್ಷಿಸಿ, ಸಂತಸ ಪಟ್ಟರು. ಶ್ರೀ ಅನಂತಕುಮಾರ್ ಅವರ ಪುತ್ರಿ, ಐಶ್ವರ್ಯಾ ಅನಂತಕುಮಾರ್ ಹಾಗೂ ಪತಿ ದಿವ್ಯೇಶ್ ಪ್ರತಾಪ ಸಿಂಗ್ ಉಪಸ್ಥಿತರಿದ್ದರು.



ವಿಧಾನಪರಿಷತ್ ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರಾದ ರಘುನಾಥ ಮಲ್ಕಾಪರೆ ಅವರು ಅನಂತ ಪ್ರೇರಣಾ ಕೇಂದ್ರಕ್ಕೆ ಜು.12 ರಂದು ಭೇಟಿ ನೀಡಿದ್ದರು.




ವಿಜಯ ವಿದ್ಯಾಲಯ ಸಂಸ್ಥೆಗಳ ಸಮೂಹಗಳ ಮುಖ್ಯಸ್ಥ ರಘುನಂದನ್ ಅವರು 'ಚಿಣ್ಣರ ಚೇತನ' ಎಂಬ ವರ್ಣರಂಜಿತ ಗೋಡೆಪತ್ರಿಕೆಯನ್ನು, ಅನಂತ ಪ್ರೇರಣಾ ಕೇಂದ್ರದಲ್ಲಿ ಜು.13ರಂದು ಅನಾವರಣಗೊಳಿಸಿದರು. ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮೊದಲಾದ ಗಣ್ಯರಿದ್ದರು.



ಬೆಳಗಾವಿ ದಕ್ಷಿಣ ಮತಕ್ಷೇತ್ರದ ಶಾಸಕ ಅಭಯಚಂದ್ರ ಪಾಟೀಲರು ಅನಂತಕುಮಾರ್ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದರು.



ಬೆಂಗಳೂರಿನ ಹೊಸಕೆರೆಹಳ್ಳಿಯ ಲಿಟಲ್ ಫ್ಲವರ್ ಶಾಲೆಯ ಶಿಕ್ಷಕರು ಹಾಗೂ ಸುಮಾರು 307 ವಿದ್ಯಾರ್ಥಿಗಳು 2023ರ ಜುಲೈ 5,6 ಹಾಗೂ 7 ಹೀಗೆ ಮೂರೂ ದಿನ ತಂಡಗಳಲ್ಲಿ ಆಗಮಿಸಿ, ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದ್ದರು.



ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಸಿಟಿಯ ನ್ಯೂಟೌನ್ ನಲ್ಲಿರುವ ಮಾರಗೊಂಡನಹಳ್ಳಿ ಕೆರೆಯ ಬದಿ ಯುತಿಯೋಪಿಯಾ ಇಂಡಿಯಾ ಪ್ರೈ.ಲಿ. (ಎ ಪ್ರೊಮೆಥೆಸ್ ಗ್ರೂಪ್ ಆಫ್ ಕಂಪನಿ) ಸಹಯೋಗದಲ್ಲಿ ಅದಮ್ಯ ಚೇತನ ಸಂಸ್ಥೆಯು ಜುಲೈ 9 ರಂದು ಹಮ್ಮಿಕೊಂಡ 393ನೇ 'ಹಸಿರು ಭಾನುವಾರ' ಕಾರ್ಯಕ್ರಮದಲ್ಲಿ ಔಷಧಿ, ಹಣ್ಣು, ಹೂವುಗಳು ಹೀಗೆ ನಾನಾ ಜಾತಿಯ ಸಸಿಗಳನ್ನು ನೆಡಲಾಯಿತು. ಅದಮ್ಯ ಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಕಂಪನಿಯ ನಿರ್ದೇಶಕ ಶ್ರೀ ಜಯನಂದನ್ ಸೇರಿದಂತೆ ನಾನಾ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಅನಂತ ಚಿತ್ರಸಂಪುಟ

ಸಂಸದೀಯ ವ್ಯವಹಾರಗಳ ಸಚಿವರಾಗಿ, ಜನರನ್ನು ಸಂಪರ್ಕಿಸುವಲ್ಲಿನ ಮುತ್ಸದ್ದಿತನವು ಅವರ ವ್ಯಕ್ತಿತ್ವದ ಪ್ರಮುಖ ಅಂಶವೆಂದು ಹೇಳಬಹುದು. ಇದು ಅವರ ಮಂತ್ರದಂಡವಷ್ಟೇ ಅಲ್ಲ; ಅವರ ಉಚ್ಛ್ರಾಯ ಕಾಲವೂ ಹೌದು. ತಮ್ಮ ಹಸನ್ಮುಖದಿಂದ ಅವರು ಸದಾ ವಿರೋಧ ಪಕ್ಷದವರೊಂದಿಗೆ ಸೌಹಾರ್ದಯುತ ಸಂಬಂಧವನ್ನು ಬೆಳೆಸುವಲ್ಲಿ ಯಶಸ್ವಿಯಾಗುತ್ತಿದ್ದರು. -ಅರುಣ್ ಜೇಟ್ಲಿ, (ಮಾಜಿ) ಕೇಂದ್ರ ಸಚಿವರು



















